# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 36 ಸಂಚಿಕೆ : 18 ಮನ್ಮಥ–ಮೇಷ ಕಲಿಯುಗಾಬ್ದ 5117 1–5–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4





ದೆಹಲಿಯಲ್ಲಿ ನಡೆದ 'ರಾಷ್ಟ್ರೀಯ ಸೇವಾ ಸಂಗಮ'ದಲ್ಲಿ ವಿಪ್ರೋ ಸಂಸ್ಥೆಯ ಅಧ್ಯಕ್ಷ ಅಜೀಂ ಪ್ರೇಮ್‌ಜೀ, ಜಿಎಮ್ಆರ್ ಗ್ರೂಪ್‌ನ ಮಲ್ಲಿಕಾರ್ಜುನ ರಾವ್, ಆರೆಸ್ಸೆಸ್ ಸರಸಂಘಚಾಲಕ ಮೋಹನ ಭಾಗವತ್ ಪಾಲ್ಗೊಂಡರು. ಆರೆಸ್ಸೆಸ್‌ನಿಂದ ಪ್ರೇರಣೆ ಪಡೆದ ಸೇವಾ ಸಂಘಟನೆ ಸೇವಾಭಾರತಿ ಆಯೋಜಿಸಿದ್ದ ಮೂರು ದಿನಗಳ ಈ ಸಮಾವೇಶವನ್ನು ಮಾತಾ ಅಮೃತಾನಂದಮಯೀ ಉದ್ಘಾಟಿಸಿದರು. ದೇಶದ 532 ಜಿಲ್ಲೆಗಳ 707 ಸೇವಾಸಂಘಟನೆಗಳು ಭಾಗವಹಿಸಿದ್ದವು.

# ಸ್ವದೇಶಿಭಂಡಾರ – ಹೀಗೊಂದು ಸಾಧ್ಯತೆ

ಹೀಗೊಂದು ಅಂಗಡಿಯನ್ನು ಊಹಿಸಿಕೊಳ್ಳಿ. ಇಲ್ಲಿ ದಿನಬಳಕೆಯ ವಸ್ತುಗಳಿಂದ ಹಿಡಿದು, ಆಯುರ್ವೇದೀಯ ಔಷಧಿಗಳು,ಸೌಂದರ್ಯವರ್ಧಕಗಳು, ಸಾವಯವ ಆಹಾರ ಧಾನ್ಯಗಳು, ಟೂತ್ ಪೇಸ್ಟ್, ಬ್ರಷ್, ಸೋಪು ಮೊದಲಾದ ಹತ್ತು ಹಲವು ಬಗೆಯ, ವಿವಿಧ ಉತ್ಪಾದಕರು ತಯಾರಿಸಿದ ಉತ್ಪನ್ನಗಳೊಂದಿಗೆ ಅವುಗಳ ಬಳಕೆ, ಉಪಯೋಗಗಳ ಕುರಿತು ಉಚಿತ ಮಾಹಿತಿಯೂ ಸಹ ಒಂದೇ ಸೂರಿನಡೆ ಲಭ್ಯ. ಇದರಲ್ಲೇನು ವಿಶೇಷ, ಯಾವುದೋ ಶಾಪಿಂಗ್ ಮಾಲ್‌ನ ಕುರಿತು ಮಾತನಾಡುತ್ತಿರಬಹುದು ಎಂದು ಭಾವಿಸಬೇಡಿ. ಮೇಲ್ನೋಟಕ್ಕೆ ಸಾಮಾನ್ಯ ವ್ಯಾಪಾರ ಮಳಿಗೆಯಂತೆಯೇ ಕಾಣುವ ಇಲ್ಲಿ ಸಿಗುವ ವಸ್ತುಗಳಲ್ಲಿ ಅತ್ಯಂತ ಪ್ರಮುಖವಾದ ವಿಶೇಷವೆಂದರೆ ಇಲ್ಲಿ ಸಿಗುವ ಪ್ರತಿಯೊಂದು ವಸ್ತುವೂ ಸಹ ಸ್ವದೇಶಿ. ರಾಜ್ಯಾದ್ಯಂತ 'ಸ್ವದೇಶಿ ವಸ್ತು ಭಂಡಾರ' ಎಂಬ ಹೆಸರಿನಲ್ಲಿ ಇಂತಹ ಸುಮಾರು 45 ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಈ 45 ಅಂಗಡಿಗಳೂ ಪ್ರಾರಂಭವಾಗಿದ್ದು ಸ್ವದೇಶಿ ಜಾಗರಣ ಮಂಚ್‌ನ ಪ್ರೇರಣೆ ಮತ್ತು ಸಲಹೆಯಿಂದ. ವ್ಯವಹಾರ ಮತ್ತು ಮಾಲೀಕತ್ವದ ದೃಷ್ಟಿಯಿಂದ ಇವೆಲ್ಲವೂ ಸ್ವತಂತ್ರ ಹಾಗೂ ಇನ್ನಿತರೆ ಯಾವುದೇ ಸಾಮಾನ್ಯ ಅಂಗಡಿಗಳಂತೆಯೇ. ಆದರೆ ಈ 45 ಅಂಗಡಿಗಳ ಮಾಲಿಕರೆಲ್ಲರೊಂದಿಗೂ ಸ್ವದೇಶಿ ಜಾಗರಣ ಮಂಚ್ ಸಂಪರ್ಕದಲ್ಲಿದ್ದು, ವಸ್ತುಗಳ ತಯಾರಿಕೆ, ಲಭ್ಯತೆ ಹಾಗೂ ಹೊಸ ಹೊಸ ಸಾಧ್ಯತೆಗಳ ಬಗ್ಗೆ ಅಂಗಡಿಗಳನ್ನು ನಡೆಸುತ್ತಿರುವವರೊಂದಿಗೆ ಪರಸ್ಪರ ಚರ್ಚೆ, ಸಂವಾದಗಳನ್ನು ಏರ್ಪಡಿಸುತ್ತಿರುತ್ತದೆ.

**"ಬಳಸುವ ವಸ್ತುಗಳು, ಬಂಡವಾಳ ದೇಶಿಯಾಗಿರಲೀ ಜ್ಞಾನ ಅಂತರಾಷ್ಟ್ರೀಯ ಮಟ್ಟದ್ದಾಗಿರಲಿ" – ಜೆ.ಎಂ.ಕೇನ್ಸ್**




## ಸ್ವದೇಶಿ ಭಂಡಾರ, ಆನೇಕಲ್

ರಾಜ್ಯದ ಎಲ್ಲಾ 45 ಸ್ವದೇಶಿ ಭಂಡಾರಗಳ ಹೆಸರು ಒಂದೇ ಆದರೂ ಪ್ರತಿಯೊಂದು ತನ್ನದೇ ಆದ ವಿಭಿನ್ನತೆ ಹೊಂದಿದೆ. ಆನೇಕಲ್ಲಿನ ಭಂಡಾರವು ಆಯುರ್ವೇದ ಕೇಂದ್ರಿತ ಸ್ವದೇಶಿ ವಸ್ತು ಭಂಡಾರವಾಗಿದ್ದು, ಸ್ವದೇಶಿ ಅಂಗಡಿಯ ಒಳಗಡೆಯೇ ಆಯುರ್ವೇದಿಕ್ ಕ್ಲಿನಿಕ್ ನಡೆಯುತ್ತದೆ. ನಿರ್ದಿಷ್ಟ ಅವಧಿಗಳಲ್ಲಿ ವೈದ್ಯರು ಲಭ್ಯವಿರುತ್ತಾರೆ.

ಬಾಬಾ ರಾಮ್‌ದೇವ್ ಪತಂಜಲಿ ಸಂಸ್ಥೆ, ಉಡುಪಿಯ ಸ್ವದೇಶಿ ಆಯುರ್ವೇದ, ರಾಮಚಂದ್ರಾಪುರ ಮಠದ ಗೋಶಾಲೆಯ ಉತ್ಪನ್ನಗಳು, ನಂಜನಗೂಡಿನ ಗೃಹ ಕೈಗಾರಿಕೆ, ಸ್ಥಳೀಯ ಗೃಹೋದ್ಯಮಗಳಲ್ಲಿ ತಯಾರಾದ ಉತ್ಪನ್ನಗಳು, ಆರ್ಟ್ ಆಫ್ ಲಿವಿಂಗ್‌ನ ವಸ್ತುಗಳು ಹೀಗೆ ಹತ್ತು ಹಲವು ಬಗೆಯ ಸಾಮಗ್ರಿಗಳು ದೊರಕುವ ಈ ಅಂಗಡಿಯ ಪ್ರಮುಖ ಆಕರ್ಷಣೆಗಳು:

- ಸಾವಯವ ಕೃಷಿ ಉತ್ಪನ್ನಗಳು: ಪಾಲಿಷ್ ಮಾಡದ ಕೆಂಪಕ್ಕಿ, ರಾಜ್ಯದ ಹಲವೆಡೆ ತಯಾರಿಸಿದ ಸುಮಾರು 6–8 ಬಗೆಯ ಬೆಲ್ಲ, ಕಿರು ಧಾನ್ಯಗಳು, ಮಸಾಲೆ ಪದಾರ್ಥಗಳು, ಎಣ್ಣೆ ಇತ್ಯಾದಿ.
- ಗೋ(ದೇಶಿ ಗೋವು) ಆಧಾರಿತ ಉತ್ಪನ್ನಗಳು: ತುಪ್ಪ, ಪಂಚಗವ್ಯ ಸೋಪ್, ಹಲ್ಲು ಪುಡಿ, ವಿಭೂತಿ, ಅಭ್ಯಂಗ ತೈಲ, ಔಷಧೀಯ ಗುಣಗಳುಳ್ಳ ಗೋ ಅರ್ಕ, ಕ್ಷಾರವಟಿ, ಚೂರ್ಣ, ಸಾವಯವ ಸೊಳ್ಳೆ ಬತ್ತಿ, ಫಿನಾಯಿಲ್ ಇತ್ಯಾದಿ.
- ಆಯುರ್ವೇದಿಕ್ ಪಾನೀಯಗಳು: ಸೊಗದೆ ಬೇರು, ನೆಲ್ಲಿಕಾಯಿ, ಲೋಳೆಸರ, ಶುಂಠಿ, ಜೀರಿಗೆ, ಪುನರ್‌ಪುಳಿ ಹೀಗೆ ಹಲವು ಬಗೆಯ ಫಲ ಗಿಡಮೂಲಿಕೆಗಳ ಪಾನೀಯಗಳು
- ಜೇನಿನ ಉತ್ಪನ್ನಗಳು
- ಖಾದ್ಯ ಉತ್ಪನ್ನಗಳು: ಸಿಹಿ ತಿಂಡಿಗಳು, ಉಪ್ಪಿನಕಾಯಿ, ಜ್ಯಾಮ್, ರಾಗಿ ಮಾಲ್ಟ್, ಒಣ ಹಣ್ಣುಗಳು ಇತ್ಯಾದಿ.
- ಸುತ್ತಲಿನ ಗ್ರಾಮಗಳ ಗೃಹಕೈಗಾರಿಕೆಯಲ್ಲಿ ತಯಾರಾದ ದಿನ ಬಳಕೆಯ ವಸ್ತುಗಳು
- ಗಿಡಮೂಲಿಕೆಗಳಿಂದ ತಯಾರಿಸಿದ ಸೌಂದರ್ಯವರ್ಧಕಗಳು ಇತ್ಯಾದಿ.

ಸುಮಾರು ಒಂದು ವರ್ಷಕ್ಕೂ ಹೆಚ್ಚಿನ ಸಮಯದಿಂದ ಈ ಅಂಗಡಿಯನ್ನು ನಡೆಸುತ್ತಿರುವ ಶ್ರೀ ವೆಂಕಟ್ ಮತ್ತು ಅವರ ಧರ್ಮಪತ್ನಿ ತಮ್ಮ ಅನುಭವದಿಂದ ಹೇಳುವ ಮಾತು ಹೀಗಿದೆ:

- ಒಂದು ಲಕ್ಷ ರೂಪಾಯಿಗಿಂತಲೂ ಕಡಿಮೆ ಮೂಲಧನದಿಂದ ಸ್ವದೇಶಿ ಭಂಡಾರವನ್ನು ಆರಂಭಿಸಬಹುದು.
- ದಿನ ಬಳಕೆಯ ವಸ್ತುಗಳು, ಸಾಬೂನು ಸೌಂದರ್ಯವರ್ಧಕಗಳು ಇತ್ಯಾದಿಗಳು ಹೆಚ್ಚಾಗಿ ವ್ಯಾಪಾರವಾಗುವುದರಿಂದ ಮೊದಲಿಗೆ ಇಂತಹ 'ಫಾಸ್ಟ್ ಮೂವಿಂಗ್' ಸಾಮಾನುಗಳನ್ನು ಹೆಚ್ಚು ಇಡುವುದು ಒಳಿತು.
- ಸಾವಯವ ಸಾಮಗ್ರಿಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವ ಉದ್ದೇಶವಿತ್ತು. ಆದರೆ ಆರಂಭದಲ್ಲಿ ಗ್ರಾಹಕರಿಗೆ ಬೆಲೆ ಹೆಚ್ಚು ಎಂದು ಅನಿಸುತ್ತಿದ್ದ ಕಾರಣ ಸ್ವಲ್ಪ ಕಷ್ಟವಾಯಿತು.

*(3ನೇ ಪುಟಕ್ಕೆ)*

## ಈ ಸ್ವದೇಶಿ ಭಂಡಾರಗಳ ಕೆಲ ವಿಶೇಷತೆಗಳು

- ಸ್ವದೇಶಿ ಸಿದ್ಧಾಂತದ ಕುರಿತು, ಆರೋಗ್ಯಕರ ಜೀವನಶೈಲಿ ಮತ್ತು ಆಹಾರ ಪದ್ಧತಿಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸವೂ ಸಹ ಈ ಅಂಗಡಿಗಳ ಮೂಲಕ ನಡೆಯುತ್ತಿದೆ.
- ದೇಶಕಾರ್ಯದ ಜೊತೆಜೊತೆಗೇ, ಜೇಬು ತುಂಬಿಸುವ ಲಾಭದಾಯಕ ವ್ಯವಹಾರ ಇದು.
- ಬ್ರ್ಯಾಂಡ್‌ಗಳ ಕಲ್ಪನೆಗೆ ಒತ್ತು ಕೊಡದೇ, ವ್ಯಕ್ತಿಯ ಮೇಲಿನ ನಂಬಿಕೆಯ ಆಧಾರದ ಮೇಲೆ ವಸ್ತುಗಳ ಖರೀದಿಯಾಗುವಂತಾಗಬೇಕು ಎಂಬ ಸ್ವದೇಶಿ ಕಲ್ಪನೆಗೆ ಪೂರಕ ಈ ಅಂಗಡಿಗಳ ಕಾರ್ಯವೈಖರಿ.
- ಸ್ಥಳೀಯವಾಗಿ ಮತ್ತು ಗೃಹ ಕೈಗಾರಿಕೆಗಳಲ್ಲಿ ತಯಾರಿಸಿದ ಉತ್ಪನ್ನಗಳ ಮಾರಾಟಕ್ಕೆ ಒತ್ತು.
- ಸಾವಯವ ಪದಾರ್ಥಗಳ ಮಹತ್ವದ ಬಗ್ಗೆ ಜನರಿಗೆ ಮನವರಿಕೆ ಮಾಡಿ ಅವುಗಳ ಬಳಕೆಯನ್ನು ಪ್ರೋತ್ಸಾಹಿಸುವುದು.

ಇದಲ್ಲದೇ ಬೇರೆ ಬೇರೆ ಹೆಸರಿನಲ್ಲಿ ಹಲವಾರು ಸ್ವದೇಶಿ ಪಾನೀಯಗಳ ಅಂಗಡಿಗಳು, ಸಾವಯವ ಪದಾರ್ಥಗಳ ಮಳಿಗೆಗಳು ಕಾರ್ಯ ನಿರ್ವಹಿಸುತ್ತಿವೆ.

## ಏನಿದು ಸ್ವದೇಶಿ?

- ಸ್ವದೇಶಿ ಎಂದರೆ ದೇಶ ಮತ್ತು ಸಮಾಜಕ್ಕೆ ಸ್ವಾಭಾವಿಕ ಮತ್ತು ಸ್ಥಳೀಯವಾದ್ದು ಎಂದು ಅರ್ಥ. ಹಾಗೆಂದ ಮಾತ್ರಕ್ಕೆ ಹೊರಗಿನ ಪ್ರಯೋಜನಕಾರಿ ಹಾಗೂ ಆರೋಗ್ಯಕರ ಅಂಶಗಳನ್ನು ಅಳವಡಿಸಿಕೊಳ್ಳುವ ಅವಕಾಶವಿಲ್ಲ ಎಂದಲ್ಲ. ನಮ್ಮಲ್ಲಿಲ್ಲದ ಸದ್ವಿಷಯವಸ್ತುಗಳು ಎಲ್ಲಿಂದಲಾದರೂ ಬರಬಹುದು. ಅದಕ್ಕೇನು ಅಡ್ಡಿಯಿಲ್ಲ. ಈ ನೀತಿ ಆರ್ಥಿಕತೆ, ಸಂಸ್ಕೃತಿ ಹಾಗೂ ತಂತ್ರಜ್ಞಾನ ಎಲ್ಲಕ್ಕೂ ಅನ್ವಯಿಸುತ್ತದೆ.
- ಭಾರತದ ವಿಕಾಸ ಭಾರತೀಯರಿಂದ ಮಾತ್ರ ಸಾಧ್ಯ ಎನ್ನುವ ತತ್ವ.
- ಸರಳ ಜೀವನ – ಉನ್ನತ ಚಿಂತನೆ.
- ಇದು ದೂರದ್ದಕ್ಕಿಂತ ನೆರೆಹೊರೆಯದ್ದಕ್ಕೆ ಆದ್ಯತೆ ಕೊಡುವ ನೀತಿ.
- ಗೊತ್ತುಗುರಿಯಿಲ್ಲದ ರೀತಿಯ ಅನಿಯಮಿತ ಬಳಕೆಯ ಭೋಗವಾದವನ್ನು ಒಪ್ಪದ, ಅಗತ್ಯ ಆಧಾರಿತ ಜೀವನವನ್ನು ಅನುಮೋದಿಸುವ ತತ್ವ.
- ಸಾಮಾಜಿಕ–ಆರ್ಥಿಕ ವಿತರಣಾ ವ್ಯವಸ್ಥೆಗಾಗಿ ಕುಟುಂಬ, ಸಮುದಾಯ ಮತ್ತು ಸಮಾಜವನ್ನು ಅವಲಂಬಿಸಿರುತ್ತದೆ.
- ಸ್ವದೇಶಿ ಎಂದೊಡನೆ ಇದು ಸ್ವಯಂ–ಸಂಪೂರ್ಣವಾದದ್ದು, ಭಾರತದ ಹೊರಗಿನದ್ದು ಯಾವುದೂ ಸಲ್ಲ ಎಂದೇನೂ ಇಲ್ಲ. ಬದಲಿಗೆ, ಇದು ಕೇವಲ ಅಗತ್ಯ–ಆಧಾರಿತವಾಗಿ ಮಾತ್ರ ವಿದೇಶದ ವಸ್ತುಗಳಿಗೆ ಬಾಗಿಲು ತೆರೆಯುವ ಜಾಗತಿಕ ಪರ್ಯಾಯ.
- ಸರಳ ಶಬ್ದಗಳಲ್ಲಿ ಹೇಳುವುದಾದರೆ, ಸ್ವದೇಶಿ ಚಿಂತನೆಯು ಪಾಶ್ಚಿಮಾತ್ಯ ಮಾದರಿಯ ಲಂಗುಲಗಾಮಿಲ್ಲದ ಜಾಗತೀಕರಣವನ್ನು ತಿರಸ್ಕರಿಸುತ್ತದೆ.
- ಮಾನವ ಜೀವನದ ರಾಜಕೀಯ ಮತ್ತು ಆರ್ಥಿಕ ಅಂಶಗಳನ್ನೊಳಗೊಂಡಂತೆ, ಪ್ರಕೃತಿಯೊಡನೆ ಸಾಮರಸ್ಯದ ಜೀವನ ನಡೆಸಲು ಸಮಗ್ರ ದೃಷ್ಟಿ ನೀಡುವ ಬಹು ಆಯಾಮದ ಕಲ್ಪನೆ.
- ಅಗತ್ಯ ಆಧಾರಿತ ಸ್ವದೇಶಿ ತತ್ವವು ಸಂಪತ್ತಿನ ಸೃಷ್ಟಿಯನ್ನು ವಿರೋಧಿಸುತ್ತದೆ ಎನ್ನುವುದು ತಪ್ಪು ಕಲ್ಪನೆ. ಇದು ರಾಷ್ಟ್ರೀಯ ಸಂಪತ್ತು ಮತ್ತು ಸಂಪನ್ಮೂಲಗಳ ಸಂರಕ್ಷಣೆ, ವೈಯಕ್ತಿಕ ಹಾಗೂ ಕೌಟುಂಬಿಕ ಉಳಿತಾಯಕ್ಕೆ ಒತ್ತು ಕೊಡುವ, ಅನಿಯಮಿತ ಬಳಕೆ ಮತ್ತು ಅನಗತ್ಯ ಖರ್ಚುಗಳನ್ನು ವಿರೋಧಿಸುವ ತತ್ತ್ವ ಇದಾಗಿದೆ.
- ಈ ಸ್ವದೇಶಿ ಸಂಪ್ರದಾಯವೇ ಭಾರತವನ್ನು ಪ್ರಪಂಚದಲ್ಲೇ ಅತ್ಯಂತ ಶ್ರೀಮಂತ ರಾಷ್ಟ್ರವನ್ನಾಗಿಸಿತ್ತು. ವಾಸ್ಕೋಡಗಾಮ ಹಾಗೂ ಕೊಲಂಬಸ್ ಭಾರತವನ್ನು ಹುಡುಕಿಕೊಂಡು ಬಂದಿದ್ದೂ ಅದೇ ಕಾರಣಕ್ಕಾಗಿ. ಆದರೆ ಅಷ್ಟೆಲ್ಲಾ ಶ್ರೀಮಂತಿಕೆ ಇದ್ದರೂ, ವೈಯಕ್ತಿಕವಾಗಿ ಆಸ್ತಿ ಗಳಿಸುವುದಕ್ಕೆ ಹೆಚ್ಚಿನ ಮಹತ್ವವಿರಲಿಲ್ಲ ಹಾಗೂ ಸಮಾಜದಲ್ಲಿ ಗೌರವಗಳಿಸಲು ಅದು ಪ್ರಮುಖ ಸೂಚ್ಯಂಕವೂ ಆಗಿರಲಿಲ್ಲ.

# ಸಮರ್ಥ ಭಾರತ

## ಒಂದು ಗುರಿ - ಹಲವು ದಾರಿ

# ಸಂಸ್ಕೃತ ಸಂಭಾಷಣಾ ಶಿಬಿರ

ಸಂಸ್ಕೃತ ನಮ್ಮ ದೇಶದ ಭಾಷೆ, ನಮ್ಮೆಲ್ಲರ ಭಾಷೆ. ಇಡೀ ದೇಶಾದ್ಯಂತ ಸಮಾನವಾಗಿ ಅರ್ಥವಾಗಬಲ್ಲ, ದೇಶಾದ್ಯಂತ ಸಮಾಜದ ಎಲ್ಲಾ ವರ್ಗಗಳ ಗೌರವಾದರಗಳಿಗೆ ಪಾತ್ರವಾಗಿರುವ ಭಾಷೆ ಸಂಸ್ಕೃತ. ಈ ದೇಶದ ಉಳಿದೆಲ್ಲ ಭಾಷೆಗಳೂ ಸಂಸ್ಕೃತದಿಂದಲೇ ಪುಷ್ಟಿಯನ್ನು, ಸೌಂದರ್ಯವನ್ನು ಶಬ್ದಸಂಪತ್ತನ್ನು, ವ್ಯಾಕರಣ ಸಂಪತ್ತನ್ನು, ಶಾಸ್ತ್ರಶುದ್ಧತೆಯನ್ನು ಪಡೆದಿವೆ. ಸಂಸ್ಕೃತದಲ್ಲಿರುವ ಶಬ್ದ ಸಂಪತ್ತು, ವಿಜ್ಞಾನ ಸಂಪತ್ತು, ವಿಚಾರ ಸಂಪತ್ತು ಜಗತ್ತಿನ ಇನ್ನಾವ ಭಾಷೆಯಲ್ಲಿ ಇಲ್ಲ ಎಂದು ಧೈರ್ಯದಿಂದ ಹೇಳಬಹುದು.

ಸಂಸ್ಕೃತವನ್ನು ಮತ್ತೊಮ್ಮೆ ಜನಸಾಮಾನ್ಯರ ವ್ಯವಹಾರದ ಭಾಷೆಯನ್ನಾಗಿ ಮಾಡಬೇಕೆಂಬ ಇಚ್ಛೆಯಿಂದ ಪ್ರಾರಂಭವಾದ ಸಂಸ್ಥೆ 'ಸಂಸ್ಕೃತಭಾರತಿ'. "ಎಲ್ಲೆಡೆಯೂ ಸಂಸ್ಕೃತ ಎಲ್ಲರಿಗಾಗಿ ಸಂಸ್ಕೃತ" ಎಂಬ ಘೋಷವಾಕ್ಯ ಸಂಸ್ಕೃತಭಾರತಿಯ ಮೂಲಮಂತ್ರ. ಈ ಕೆಲಸ ಹಿಂದು ಸೇವಾ ಪ್ರತಿಷ್ಠಾನದ ಒಂದು ಯೋಜನೆಯ ರೂಪದಲ್ಲಿ ಎಂಬತ್ತರ ದಶಕದಲ್ಲಿ ಪ್ರಾರಂಭವಾಯಿತು. ಕಳೆದ 34 ವರ್ಷಗಳಲ್ಲಿ ಎಲ್ಲರಿಗಾಗಿ ಸಂಸ್ಕೃತ ಸಂಭಾಷಣಾ ಶಿಬಿರ, ವಿಶ್ವ ಪುಸ್ತಕ ಮೇಳ, ಸಂಸ್ಕೃತ ಸಮ್ಮೇಳನ, ಬಾಲಕೇಂದ್ರ, ಗೀತಾ ಶಿಕ್ಷಣ, ಅಂಚೆ ಮೂಲಕ ಸಂಸ್ಕೃತ ಪಾಠ, ಎಳೆಯರಿಗಾಗಿ ಸರಳ ಸಂಸ್ಕೃತಪರೀಕ್ಷೆ, ಸಂಭಾಷಣಾ ಸಂದೇಶ ಸಂಸ್ಕೃತ ಮಾಸಪತ್ರಿಕೆ, ಭಾಷಾಬೋಧನ ವರ್ಗಗಳು, ವ್ಯಾಕರಣ ವರ್ಗಗಳು, ಆವಾಸೀಯ ಪ್ರಶಿಕ್ಷಣ ವರ್ಗಗಳು ಹೀಗೆ ವಿವಿಧ ಆಯಾಮಗಳ ಮುಖಾಂತರ ವಿಶ್ವಾದ್ಯಂತ ಸಂಸ್ಕೃತ ಕಂಪನ್ನು ಪಸರಿಸುವಲ್ಲಿ ಯಶಸ್ವಿಯಾಗಿದೆ.

### ಚಟುವಟಿಕೆ ಬಗ್ಗೆ

ಸಂಸ್ಕೃತದ ವಿಶೇಷತೆ, ಅದರ ಶ್ರೇಷ್ಠತೆಯ ಕುರಿತು ಪೂಜ್ಯ ಭಾವನೆಯಿಂದ "ಸಂಸ್ಕೃತ ಎಂದರೆ ದೇವಭಾಷೆ, ಇಂದ್ರ ಚಂದ್ರ" ಎಂದೆಲ್ಲಾ ಬೇರೆ ಭಾಷೆಗಳಲ್ಲಿ ಹಾಡಿ ಹೊಗಳುವ ವಿದ್ವಾಂಸರಿಗೆ ಯಾವುದೇ ಕೊರತೆಯಿಲ್ಲ! ಸಂಸ್ಕೃತ ಜನಸಾಮಾನ್ಯರ ಭಾಷೆಯಾಗಬೇಕಾದರೆ ಕೇವಲ "ಸಂಸ್ಕೃತದ ಬಗ್ಗೆ ಮಾತಾನಾಡಬೇಡಿ, ಸಂಸ್ಕೃತದಲ್ಲೇ ಮಾತನಾಡಿ" ಎಂಬ ಆಗ್ರಹದೊಂದಿಗೆ ಸಂಸ್ಕೃತಭಾರತಿ ಕೆಲಸ ಮಾಡುತ್ತಿದೆ. ಈ ಕಾರಣಕ್ಕಾಗಿ ಕಂಡುಕೊಂಡ ಮಾರ್ಗ ಸಂಸ್ಕೃತ ಸಂಭಾಷಣಾ ಶಿಬಿರ!

ಸಂಸ್ಕೃತದ ಬಗ್ಗೆ ಪ್ರೀತಿಯನ್ನು ಶ್ರದ್ಧೆಯನ್ನು ಇರಿಸಿಕೊಂಡು ಅದರ ಉತ್ಥಾನಕ್ಕಾಗಿ ಪ್ರಯತ್ನಪಡುತ್ತಿರುವ ಸಾವಿರಾರು ಸಂಸ್ಥೆಗಳು ದೇಶದಲ್ಲಿ ಇಂದಿಗೂ ಕೆಲಸ ಮಾಡುತ್ತಿವೆ. ಆ ಎಲ್ಲ ಸಂಸ್ಥೆಗಳ ಕಾರ್ಯಕ್ಕೂ ಸಂಸ್ಕೃತಭಾರತಿಯ ಕಾರ್ಯಕ್ಕೂ ಒಂದು ಪ್ರಮುಖವಾದ ವ್ಯತ್ಯಾಸವಿದೆ. ಸಂಸ್ಕೃತಭಾರತಿ ಎಲ್ಲರಿಗೂ ಸಂಸ್ಕೃತದಲ್ಲಿ ಮಾತನಾಡಲು ಕಲಿಸುತ್ತದೆ. ಸಂಸ್ಕೃತದಲ್ಲೇ ದಿನನಿತ್ಯದ ವ್ಯವಹಾರಗಳನ್ನು ನಡೆಸಲು ಪ್ರೇರೇಪಿಸುತ್ತದೆ. '10 ದಿನಗಳಲ್ಲಿ ಸರಳ ಸಂಸ್ಕೃತ ಮಾತನಾಡಿ' ಎಂಬ ವಿಶೇಷ 'ಸಂಭಾಷಣಾ ಶಿಬಿರ'ಗಳನ್ನು ಪ್ರಾರಂಭದ ದಿನಗಳಿಂದ ಇಲ್ಲಿಯವರೆಗೆ ನಡೆಸಿ 1,40,000 ಶಿಬಿರಗಳನ್ನು ಪೂರ್ಣಗೊಳಿಸಿದೆ. ಸುಮಾರು ಒಂದು ಕೋಟಿಗೂ ಹೆಚ್ಚು ಜನ ಇದರ ಫಲಾನುಭವಿಗಳಾಗುವಂತೆ ಮಾಡಲಾಗಿದೆ.

ಈ ಸಂಭಾಷಣಾ ಶಿಬಿರಗಳಲ್ಲೂ ಮೊದಲ ನಿಮಿಷದಿಂದಲೇ "ಮಮ ನಾಮ ರಾಮಃ, ಭವತಃ ನಾಮ ಕಿಂ?" ಎಂದು ಪ್ರಶ್ನಿಸಿ ಉತ್ತರ ಪಡೆದು ಶಿಬಿರಾರ್ಥಿಯಿಂದ ಸಂಸ್ಕೃತದಲ್ಲಿ ಮಾತನಾಡಿಸಲಾಗುತ್ತದೆ. ಹತ್ತು ದಿನಗಳು ದಿನಕ್ಕೆರಡು ಗಂಟೆಯಂತೆ ಕೊಟ್ಟಲ್ಲಿ ನಿರಕ್ಷರಿಯೂ ಸಾಮಾನ್ಯ ವ್ಯವಹಾರವನ್ನು ಸಂಸ್ಕೃತದಲ್ಲಿ ಮಾತನಾಡಲಾಗುವಂತೆ ಇಲ್ಲಿನ ಶಿಕ್ಷಣದ ವ್ಯವಸ್ಥೆ ಇರುವುದು ಸಂಸ್ಕೃತಭಾರತಿಯ ವಿಶೇಷತೆ. ಶಿಬಿರದ ವಿಶೇಷತೆಯೆಂದರೆ:

1. ಕಳೆದ ಅನೇಕ ದಶಕಗಳಲ್ಲಿ ಹಂತ ಹಂತವಾಗಿ, ಯಶಸ್ವಿಯಾಗಿ ಬೆಳೆದು ಬಂದ ಪಾಠ ಕ್ರಮ
2. ಸಂಸ್ಕೃತ ಸರಳ, ಸುಲಲಿತ, ಅದು ಕಷ್ಟವಲ್ಲ, ಕ್ಲಿಷ್ಟವೂ ಅಲ್ಲ ಎಂಬ ಭಾವನೆಯನ್ನು ಬಿತ್ತುವುದು
3. ಸಂಸ್ಕೃತಾಸಕ್ತರಿಗೆ ಭಾಷಾ ಪ್ರವೇಶಕ್ಕೆ ಮೊದಲ ಸೋಪಾನ
4. ಸರಳ ಸಂಭಾಷಣೆಯ ಮುಖಾಂತರ ಪಾಠನ, ಶಿಬಿರಾರ್ಥಿಗೆ ಯಾವುದೇ ಪೂರ್ವ ತಯಾರಿ ಅವಶ್ಯಕವಿಲ್ಲ
5. ಸಂಸ್ಕೃತ ಪ್ರಾಥಮಿಕ ಜ್ಞಾನದ ಅವಶ್ಯಕತೆಯಿಲ್ಲ, ಓದು ಬರಹ ಗೊತ್ತಿಲ್ಲದೆಯೂ ಸಂಸ್ಕೃತದಲ್ಲಿ ಮಾತನಾಡಬಹುದು
6. ವಯಸ್ಸು, ಲಿಂಗ, ಜಾತಿ–ಧರ್ಮದ ಭೇದವಿಲ್ಲ, ಎಲ್ಲರೂ ಭಾಗವಹಿಸಲು ಮುಕ್ತ ಆಹ್ವಾನ
7. ಇದು ಸಂಪೂರ್ಣ ಉಚಿತ!

ಸಂಭಾಷಣಾ ಶಿಬಿರಗಳು ಸಂಸ್ಕೃತ ಭಾರತಿಯ ಮೂಲಭೂತ ಕಾರ್ಯವಾಗಿವೆ. ಇದರ ಜೊತೆಯಲ್ಲಿ ಭಾಷಾಬೋಧನ ವರ್ಗಗಳು, ವ್ಯಾಕರಣ ವರ್ಗಗಳು, ಆವಾಸೀಯ ಪ್ರಶಿಕ್ಷಣ ವರ್ಗಗಳು, ಸಾಪ್ತಾಹಿಕ ಮಿಲನಗಳು ಇತ್ಯಾದಿಗಳ ಮೂಲಕ ಸಂಭಾಷಣ ಶಿಬಿರಗಳಿಗೆ ಬಂದವರನ್ನು ನಿರಂತರವಾಗಿ ಸಂಪರ್ಕದಲ್ಲಿ ಉಳಿಸಿಕೊಂಡು ಇನ್ನಷ್ಟು ಹೆಚ್ಚಿನ ಪ್ರಗತಿ ಸಾಧಿಸುವಂತೆ, ಅವರೆಲ್ಲ ಕಾರ್ಯಕರ್ತರಾಗುವಂತೆ ನಿರಂತರ ಚಟುವಟಿಕೆಗಳು ನಡೆಯುತ್ತಿದೆ.

### ನಾವೇನು ಮಾಡಬಹುದು ?

ಸಂಸ್ಕೃತ ಜನಸಾಮಾನ್ಯರ ಬಾಯಲ್ಲಿ ನಲಿದಾಡಬೇಕಾದರೆ ಎಲ್ಲರ ಸಹಕಾರ, ಸಹಾಯ ಅತ್ಯವಶ್ಯ. ಸಂಭಾಷಣಾ ಶಿಬಿರಗಳಲ್ಲಿ ಎಲ್ಲ ನಾಗರಿಕರು ಸಕ್ರಿಯವಾಗಿ ಅನೇಕ ವಿಧದಲ್ಲಿ ಪಾಲ್ಗೊಳ್ಳಬಹುದು.

1. ಒಮ್ಮೆ ಕೂಡ ಸಂಭಾಷಣಾ ಶಿಬಿರದಲ್ಲಿ ಭಾಗವಹಿಸಿಲ್ಲವಾದರೆ, ಮೊದಲು ಒಂದು ಶಿಬಿರದಲ್ಲಿ ಭಾಗವಹಿಸಿ.
2. ಶಿಬಿರವನ್ನು ಆಯೋಜನೆ ಮಾಡಿ, ಹೆಚ್ಚು ಜನರಿಗೆ ಸಂಸ್ಕೃತಭಾಷಾಜ್ಞಾನ ಲಭಿಸುವಂತೆ ಮಾಡಿ.
3. ನಮ್ಮ ಮನೆ, ವಠಾರ–ವಸತಿ ಪ್ರದೇಶ, ಬಡಾವಣೆ, ಅಪಾರ್ಟಮೆಂಟ್, ಶಾಲಾ–ಕಾಲೇಜು, ಆಫೀಸು, ಆಶ್ರಮ, ದೇವಸ್ಥಾನಗಳಲ್ಲಿ 20–25 ಜನರನ್ನು ಸೇರಿಸಿದರೆ ಸಾಕು, ಶಿಬಿರ ಪ್ರಾರಂಭ! ಜಾತಿ, ವಯಸ್ಸು, ಉದ್ಯೋಗ ಮೊದಲಾದ ಯಾವುದೇ ನಿರ್ಬಂಧ ಇಲ್ಲ.
4. ನಮ್ಮ ಕಾರ್ಯಸ್ಥಳದಲ್ಲಿ ನಾವು ಸಂಸ್ಕೃತದ ರಾಯಭಾರಿಗಳಾಗ ಬಹುದು. ಶಿಬಿರದ ಮುಖಾಂತರ ಬೇರೆ ಬೇರೆ ಸಂಸ್ಕೃತ ಪ್ರಸಾರ ಕಾರ್ಯದ ಪ್ರಚಾರ ಮಾಡಬಹುದು.
5. ಪ್ರಶಿಕ್ಷಣ ವರ್ಗಗಳಲ್ಲಿ ಭಾಗವಹಿಸಿ ಹೆಚ್ಚಿನ ತರಬೇತಿ ಪಡೆದು, ನಾವೂ ಕೂಡ ಶಿಬಿರ ನಡೆಸಬಹುದು.
6. ಮನೆಯವರೆಲ್ಲಾ ಒಟ್ಟಾಗಿ ಭಾಗವಹಿಸಿ, ಮನೆಯಲ್ಲಿ ಸರಳ ಸಂಸ್ಕೃತದಲ್ಲಿ ಮಾತನಾಡಿ ಸಂಸ್ಕೃತ ವಾತಾವರಣ ನಿರ್ಮಾಣ ಮಾಡಿ.
7. ಸಂಸ್ಕೃತಾಸಕ್ತರನ್ನೆಲ್ಲಾ ಒಟ್ಟಿಗೆ ಸೇರಿಸಿ ಸಂಸ್ಕೃತಭಾರತಿ ಕಾರ್ಯಕರ್ತರ ಜೊತೆ ಸಂವಾದ ಏರ್ಪಡಿಸಿ.

**ಸಂಪರ್ಕ:**
ಶ್ರೀ ನಾಗರಾಜ, ಮೊಬೈಲ್: 94498 51529 ಶ್ರೀ ಲಕ್ಷ್ಮೀನಾರಾಯಣ, ಮೊಬೈಲ್: 80502 50829
ಸಂಸ್ಕೃತ ಭಾರತಿ, "ಅಕ್ಷರಂ", 8ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಬೆಂಗಳೂರು–560085
ದೂರವಾಣಿ: 080–26721052, 26722576, 26421152 ಇಮೇಲ್:samskritam@gmail.com
ವೆಬ್‌ಸೈಟ್:http://samskritabharati.in

## ನೆಲದ ಮಾತು

# ವಿಠಲಾಪುರದ ಕೃಷಿ ಸಾಧಕ ಕುಟುಂಬ

'ಆರಂಭ ಅನ್ನೋದು ವರ್ಷ; ವ್ಯಾಪಾರ ಅನ್ನೋದು ನಿಮಿಷ...'–ತರೀಕೆರೆ ತಾಲ್ಲೂಕು ವಿಠಲಾಪುರ ಗ್ರಾಮದ ವೀರಪ್ಪ ಅವರು ಆಡಿದ ಈ ಮಾತು ಅವರ ಕುಟುಂಬದ ಕೃಷಿ ಅನುಭವದ ಸಾರಸರ್ವಸ್ವ. ಕಗ್ಗಾಡಿನಂತಿದ್ದ ಅಂಕುಡೊಂಕು ಕಲ್ಲು ಭೂಮಿಯನ್ನು ಸತತ 30 ವರ್ಷಗಳ ಪರಿಶ್ರಮದಿಂದ ಫಲವತ್ತಾದ ತೋಟವನ್ನಾಗಿ ಮಾರ್ಪಡಿಸಿದ್ದು ಈ ಕುಟುಂಬದ ಮಹತ್ತರ ಸಾಧನೆ. ಮಣ್ಣನ್ನು ಗಟ್ಟಿಯಾಗಿ ನೆಚ್ಚಿ, ತಪಸ್ಸಿನಂತೆ ಅದನ್ನು ಹದಗೊಳಿಸಿದ ಇವರ ಸಾಧನೆ ರಾಜ್ಯದ ರೈತರಿಗೆ ಮಾದರಿ.ಬರಗಾಲದ ಛಾಯೆ, ಕಿತ್ತು ತಿನ್ನುವ ಬಡತನ. ಮೈ ತುಂಬಾ ಸಾಲ. ಮುಂದೇನು? ಎಂಬ ಉತ್ತರವಿಲ್ಲದ ಪ್ರಶ್ನೆ. ಮನೆಯಲ್ಲಿ ಕೂತು ಯೋಚಿಸಿದ ಸೋದರರಿಗೆ ಸಿಕ್ಕ ಉತ್ತರ ಒಂದೇ: "ದುಡಿಮೆ", ಭೂತಾಯಿಯ ಸೇವೆ. ಈ ಮಂತ್ರವನ್ನು ನಂಬಿ ನಡೆದ ವಿಠಲಾಪುರದ ವೀರಪ್ಪ, ರುದ್ರಪ್ಪ ಸೋದರರ ಒಟ್ಟೂ ಕುಟುಂಬ ಒಕ್ಕಲುತನದಲ್ಲಿ ಅಸೀಮ ಸಾಧನೆಗೈದಿದೆ.

'ಹೊಲಕ್ಕೆ ರಾಸಾಯನಿಕ ಗೊಬ್ಬರ ಹಾಕಲು ನಮಗೂ ಮನಸ್ಸಿತ್ತು; ಆದರೆ ಖರೀದಿಸಲು ಹಣ ಇರಲಿಲ್ಲ. ಹೀಗಾಗಿ ಸಾವಯದ ಮೊರೆ ಹೋದೆವು' ಎಂಬುದು ಅವರು ನೀಡುವ ಪ್ರಾಮಾಣಿಕ ಉತ್ತರ. ಆರಂಭದಲ್ಲಿ ಅನಿವಾರ್ಯತೆಯಿಂದ ಆರಂಭವಾದ ಸಾವಯವ ಪದ್ಧತಿಯ ಬೇಸಾಯ ಮುಂದೆ ಬದುಕಿನ ಒಂದು ಭಾಗವೇ ಆಗಿದ್ದು ವಿಶೇಷ. ಸಾಕಷ್ಟು ಹಣ– ಕೀರ್ತಿ ಸಂಪಾದನೆಯಾದ ನಂತರವೂ ಇವರ ಸಾವಯವ ನಿಷ್ಠೆ ಬದಲಾಗಲಿಲ್ಲ. ಇಂದು ಅವರ ಮನಸ್ಸು ಅತ್ತಿತ್ತ ಹೋಯ್ದಾಡದೆ ಸಾವಯವ ಪದ್ಧತಿಯನ್ನು ಪಟ್ಟಾಗಿ ಹಿಡಿದಿದೆ.




**ಅಮಿತ ಉತ್ಸಾಹದ, ಚಿಕಿತ್ಸಕ ದೃಷ್ಟಿಯ, ಸಮಯೋಚಿತ ಮಾತುಗಾರಿಕೆಯಲ್ಲಿ ನಿಷ್ಣಾತ, ರೈತ ಸಂಘಟಕ, ಸ್ವದೇಶಿ–ಸ್ವಾವಲಂಬಿ–ಸಾವಯವ ಕೃಷಿ–ಬದುಕುಗಳ, ಮಂತ್ರೋಪಾಸಕ, ಕೃಷಿ ಋಷಿ ಕುರುವಳ್ಳಿ ಪುರುಷೋತ್ತಮ ರಾಯರು. ಕೃಷಿ ಕ್ಷೇತ್ರದಲ್ಲಿ ಆಗಬೇಕಾದದ್ದು 'ಕ್ರಾಂತಿ' ಅಲ್ಲ ವಿಕಾಸ ಎನ್ನುವುದನ್ನು ಅನುಭವದಿಂದ ಅರಿತಿದ್ದ ರಾಯರ ಚಿಂತನೆಗಳು ಅನನ್ಯವಾಗಿವೆ. ಅವರ ಆಶಯದಂತೆ 1999ರಲ್ಲಿ ಅಸ್ಥಿತ್ವಕ್ಕೆ ಬಂದ 'ಪುರುಷೋತ್ತಮರಾವ್ ಕೃಷಿ ಸಂಶೋಧನಾ ಪ್ರತಿಷ್ಠಾನ' ರಾಯರ ಕನಸುಗಳನ್ನು ಸಾಕಾರಗೊಳಿಸುವತ್ತ ಕಾರ್ಯೋನ್ಮುಖವಾಗಿದೆ. ಸಾವಯವ ಕೃಷಿ–ಬದುಕಿನ ತತ್ವ–ಆದರ್ಶಗಳನ್ನು ನೆಲಕ್ಕಿಳಿಸುವ ಪ್ರಯತ್ನ ಮಾಸುತ್ತಿದೆ. ಸಾವಯವ ಕೃಷಿಯ ಕುರಿತು ಅಧ್ಯಯನ, ಪ್ರಯೋಗ, ತರಬೇತಿ, ಪ್ರಶಿಕ್ಷಣ, ವಿಸ್ತರಣಾ ಚಟುವಟಿಕೆಗಳನ್ನು ನಡೆದುತ್ತಿದೆ.**

**ಅಪ್ಪಟ ಕೃಷಿ ಮನೋಭಾವದ ಬದುಕನ್ನು, ತನ್ಮೂಲಕ, ಸಂತೃಪ್ತ ಜೀವನವನ್ನು ನಡೆಸುತ್ತಿರುವ, ಉಳಿದ ಕೃಷಿಕರಿಗೆ ಬೆಳಕಾಗಬಲ್ಲ ರೈತ ದಂಪತಿಗಳನ್ನು ಗುರುತಿಸಿ ಅವರನ್ನು ಸನ್ಮಾನಿಸುವ ಯೋಜನೆಯನ್ನು ಪ್ರತಿಷ್ಠಾನವು ಜಾರಿಗೊಳಿಸುತ್ತಿದೆ. ಮನ್ಮಥನಾಮ ಸಂವತ್ಸರದ ಪುರುಷೋತ್ತಮ ಸನ್ಮಾನವು ಸಾವಯವ ಕೃಷಿ ಸಾಧಕರಾದ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ವಿಠಲಾಪುರ ಗ್ರಾಮದ ಶ್ರೀಮತಿ ರುದ್ರಮ್ಮ ಹಾಗೂ ಶ್ರೀ ರುದ್ರಪ್ಪ ಮತ್ತು ಶ್ರೀಮತಿ ಚಂದ್ರಮ್ಮ ಹಾಗೂ ಶ್ರೀ ವೀರಪ್ಪ ಇವರ ಕುಟುಂಬಕ್ಕೆ ಸಂದಿದೆ.**

- ಬೇಸಾಯ ಆರಂಭಿಸಿದ ಆರಂಭದಲ್ಲಿ ರುದ್ರಪ್ಪ–ವೀರಪ್ಪ ಸಹ ವಿದೇಶಿ ತಳಿಯ ಎಚ್‌ಎಫ್, ಜರ್ಸಿ ಹಸುಗಳನ್ನು ಸಾಕಿದ್ದರು. ನಂತರ ದೇಸಿ ಗೋ ತಳಿಯ ಮಹತ್ತ್ವವನ್ನು ಅರಿತು ಸಂರಕ್ಷಿಸುವ– ಸಾಕುವ ಪ್ರತಿಜ್ಞೆ ಮಾಡಿದರು. ಗೀರ್, ಕಾಂಕ್ರೇಜ್, ಹಳ್ಳಿಕಾರ್, ಅಮೃತ್‌ಮಹಲ್, ಮಲೆನಾಡುಗಿಡ್ಡ ತಳಿಯ ಒಟ್ಟು 12 ರಾಸು ಅವರ ಕೊಟ್ಟಿಗೆಯಲ್ಲಿವೆ. ದೇಸಿ ತಳಿಯ ಘನೀಕೃತ ವೀರ್ಯವನ್ನು ಸಂಗ್ರಹಿಸಿದ್ದಾರೆ.
- ಗೀರ್ ತಳಿಯ ಎರಡು ರಾಸುಗಳಿಂದ ದಿನವೊಂದಕ್ಕೆ ಸರಾಸರಿ 10 ಲೀಟರ್ ಹಾಲು ಸಿಗುತ್ತಿದೆ.ಮೊದಲು ಹಾಲನ್ನು ಡೇರಿಗೆ ಹಾಕುತ್ತಿದ್ದರು. ಆದರೆ ಹಾಲು ಉತ್ಪಾದನೆಗೆ ಆಗುವ ವೆಚ್ಚಕ್ಕೆ ಹೋಲಿಸಿದರೆ ಸಿಗುತ್ತಿದ್ದ ಪ್ರತಿಫಲ ಕಡಿಮೆ ಎನಿಸುತ್ತಿತ್ತು. ಹೀಗಾಗಿ ಇದೀಗ ತುಪ್ಪ ತಯಾರಿಸಿ ಮಾರುವ ತಂತ್ರ ಅನುಸರಿಸುತ್ತಿದ್ದಾರೆ. ಒಂದು ಕೆ.ಜಿ.ಗೆ 1.5 ಸಾವಿರದಂತೆ ತುಪ್ಪವನ್ನು ಮಾರುತ್ತಿದ್ದಾರೆ.
- ಕೇರಳದಲ್ಲಿ ಬಳಕೆಯಲ್ಲಿರುವ ಕಾಂಗೋ ಸಿಗ್ನಲ್ ತಳಿಯ ಹುಲ್ಲನ್ನು ಈ ಕುಟುಂಬ ತಮ್ಮ ತೋಟದ ಬದು ಸೇರಿದಂತೆ ಹಲವು ನಿರುಪಯುಕ್ತ ಸ್ಥಳದಲ್ಲಿ ಬೆಳೆಸಿದೆ. ಒಟ್ಟು ಸುಮಾರು 2 ಎಕರೆ ವಿಸ್ತೀರ್ಣದಲ್ಲಿರುವ ಈ ಬಹುವಾರ್ಷಿಕ ಹುಲ್ಲು ನೀರು–ಗೊಬ್ಬರದ ಹಂಗು ಇಲ್ಲದೆ ಬೆಳೆಯುತ್ತದೆ.
- ಹಿಡಿದಿಟ್ಟ ಗೋಮೂತ್ರದೊಂದಿಗೆ ಬೇವಿನೆಣ್ಣೆ ಬೆರೆಸಿ ಕೀಟನಾಶಕವನ್ನು ಮನೆಯಲ್ಲಿಯೇ ತಯಾರಿಸಿಕೊಳ್ಳುತ್ತಾರೆ.

(4ನೇ ಪುಟಕ್ಕೆ)

ಸಂಪಾದಕೀಯ ಸಹಕಾರ: ಶ್ರೀವತ್ಸ, ಸುಮಂತ್ ನೆಮ್ಮಾರ್, ಸತ್ಯನಾರಾಯಣ ಶಾನಭಾಗ್, ಪ್ರವೀಣ್ ಪಟವರ್ಧನ್, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್, ಗುರುರಾವ್ ಕುಲಕರ್ಣಿ

1ನೇ ಪುಟದಿಂದ

## ಸ್ವದೇಶಿಭಂಡಾರ – ಹೀಗೊಂದು ಸಾಧ್ಯತೆ

- ಪ್ಯಾಕ್ ಮಾಡಿದ ಉತ್ಪನ್ನಗಳ ಆಕರ್ಷಣೆ ಹೆಚ್ಚು. ಆಯುರ್ವೇದಿಕ್ ಕಾಸ್ಮೆಟಿಕ್‌ಗಳನ್ನು ಜನರು ಹೆಚ್ಚು ಇಷ್ಟಪಡುತ್ತಾರೆ. ಉದಾಹರಣೆಗೆ ಪರ್ಲ್ ಫೇಸ್ ವಾಶ್ ಮತ್ತು ಫೇರ್‌ನೆಸ್ ಕ್ರೀಮ್‌ಗಳಂತಹ ಉತ್ಪನ್ನಗಳನ್ನು ಬೆಲೆ ಹೆಚ್ಚಿದ್ದರೂ ಹೆಚ್ಚು ಜನ ಖರೀದಿಸುತ್ತಾರೆ.
- ಔಷಧೀಯ ಉತ್ಪನ್ನಗಳನ್ನು ವಿವಿಧ ಆರೋಗ್ಯ ಸಮಸ್ಯೆಗಳಿರುವ ಗ್ರಾಹಕರಿಗೆ ಅಗತ್ಯಕ್ಕೆ ತಕ್ಕಂತೆ ನೀಡುವುದರಿಂದ, ಒಮ್ಮೆ ಕೊಟ್ಟದ್ದು ಉಪಯೋಗವಾಯಿತೋ ಇಲ್ಲವೋ ಎಂದು ಕೇಳಿ, ಪುನಃ ಕೊಡುವುದರಿಂದ ಜನರು ನಮ್ಮ ಅಂಗಡಿಯನ್ನು ಹುಡುಕಿಕೊಂಡು ಬರುತ್ತಾರೆ. ದಿನನಿತ್ಯದ ತೊಂದರೆಗಳಾದ ಗ್ಯಾಸ್ಟ್ರೈಟಿಸ್ ಮೊದಲಾದವುಗಳು ನಮ್ಮ ಔಷಧಿಯಿಂದ ವಾಸಿಯಾಗಿದೆ ಎಂದು ಎಷ್ಟೋ ಜನ ಹೇಳಿದ್ದಾರೆ.
- ಪ್ರಚಾರವನ್ನು ಅಷ್ಟಾಗಿ ಮಾಡಿಲ್ಲ, ಒಂದೆರಡು ಬಾರಿ ಕರಪತ್ರ ಹಂಚಿದೆವು. ಅಷ್ಟೊಂದು ಪ್ರಯೋಜನ ಆಗಲಿಲ್ಲ. ನಮ್ಮ ಪರಿಚಯದವರೇ ಪ್ರಚಾರ ನೀಡಿದರು. ಆನೇಕಲ್ ಸುತ್ತಮುತ್ತಲಿನ ಜನರೇ ನಮ್ಮ ಗ್ರಾಹಕರು.
- ಜನರ ಸ್ಪಂದನೆ ತುಂಬಾ ಚೆನ್ನಾಗಿದೆ. ಸ್ವದೇಶಿ ವಸ್ತುಗಳ ಬಳಕೆಗೆ, ವಿಚಾರಕ್ಕೆ ಪ್ರೋತ್ಸಾಹವಿದ್ದರೂ ಸಾಮಾನುಗಳು ಸುಲಭವಾಗಿ ಸಿಗುತ್ತಿರಲಿಲ್ಲ. ತುಂಬಾ ಜನರು ಇದನ್ನು ಹೇಳಿದ್ದಾರೆ. ಆ ಕೊರತೆಯನ್ನು ನೀಗಿಸಿದ ತೃಪ್ತಿ ಇದೆ. ಆದಾಯವೂ ಚೆನ್ನಾಗಿದೆ. ನಮ್ಮ ಕುಟುಂಬ ನಿರ್ವಹಣೆಗೆ ಸಾಕಾಗುವಷ್ಟು ಆದಾಯವಿದೆ.

> "ಆಹಾರ ಹಾಗೂ ಉಡುಪನ್ನು ಆಮದು ಮಾಡಿಕೊಳ್ಳುವ ದೇಶ ಎಂದಿಗೂ ಬಡ ರಾಷ್ಟ್ರವಾಗಿಯೇ ಉಳಿಯುತ್ತದೆ"
> – ಖಲೀಲ್ ಗಿಬ್ರಾನ್

## ಸ್ವದೇಶಿ ಭಂಡಾರ, ತುಮಕೂರು

ಕೇವಲ 50 ಚದರ ಅಡಿಗಳಷ್ಟು ಸಣ್ಣ ಜಾಗದಲ್ಲಿರುವ ಈ ಅಂಗಡಿಯನ್ನು ಪ್ರಾರಂಭಿಸಿದ್ದು ಶ್ರೀ ವಿಶ್ವನಾಥ್‌ರವರು. ಪಬ್ಲಿಕೇಷನ್ ಕಂಪನಿಯೊಂದರ ಮಾರ್ಕೆಟಿಂಗ್ ಉದ್ಯೋಗದಲ್ಲಿದ್ದ ಇವರು ತಮ್ಮ ಒತ್ತಡದ ಉದ್ಯೋಗಕ್ಕೆ ಗುಡ್‌ಬೈ ಹೇಳಿ ಸ್ವದೇಶಿ ಜಾಗರಣ್ ಮಂಚ್‌ನ ಪ್ರೇರಣೆಯಿಂದ ಈ ಅಂಗಡಿಯನ್ನು ಆರಂಭಿಸಿದರು.. ಸುಮಾರು ಒಂದೂವರೆ ವರ್ಷದಿಂದ ಯಶಸ್ವಿಯಾಗಿ ಅಂಗಡಿಯನ್ನು ನಡೆಸುತ್ತಿರುವ ಇವರು ಒಳ್ಳೆಯ ಆದಾಯವನ್ನು ಪಡೆಯುತ್ತಿರುವುದರ ಜೊತೆಗೆ ದೇಶಹಿತದ ಸತ್ಕಾರ್ಯ ಮಾಡುತ್ತಿರುವ ತೃಪ್ತಿಯಿದೆ ಎಂದು ಖುಷಿಯಿಂದ ಹೇಳುತ್ತಾರೆ.

ಮಾಸ್ ಪ್ರೊಡಕ್ಷನ್‌ಗಿಂತ ಪ್ರೊಡಕ್ಷನ್ ಬೈ ದ ಮಾಸಸ್ ನಮ್ಮ ದೇಶಕ್ಕೆ ಹೆಚ್ಚು ಸೂಕ್ತವಾದ್ದು ಎನ್ನುವ ಇವರು ಬ್ರ್ಯಾಂಡ್‌ಗಳ ಬದಲು ಸ್ಥಳೀಯವಾಗಿ ತಯಾರಿಸಿದ ವಸ್ತುಗಳ ಮಾರಾಟಕ್ಕೆ ಹೆಚ್ಚು ಆದ್ಯತೆ ನೀಡುತ್ತಾರೆ. ಸದಾ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಉತ್ಪನ್ನಗಳ ಜೊತೆಗೆ ಉಪಯುಕ್ತ ಮಾಹಿತಿಯನ್ನೂ ಸಹ ನೀಡುವ ಇವರು ಒಮ್ಮೆ ಬಂದ ಗ್ರಾಹಕರು ಪದೇ ಪದೇ ಇವರ ಅಂಗಡಿಗೆ ಬರುವಂತೆ ಕಾಳಜಿವಹಿಸುತ್ತಾರೆ. ಹೀಗೆ ಬರುವ ಸಾವಿರಾರು ಗ್ರಾಹಕರ ಸಂಪರ್ಕ ವಿವರಗಳು ಇವರ ಬಳಿ ಇರುವುದು ಇನ್ನೊಂದು ವಿಶೇಷ. ಕೇವಲ ವಸ್ತುಗಳ ಮಾರಾಟವಷ್ಟೇ ಅಲ್ಲದೇ ಬರುವ ಗ್ರಾಹಕರಿಗೆ ಅಗತ್ಯ ಮಾಹಿತಿಯನ್ನೂ ಒದಗಿಸುವತ್ತ ಇವರು ಸದಾ ಗಮನ ಹರಿಸುತ್ತಾರೆ.

### ನಿಮ್ಮ ಊರಿನಲ್ಲಿ ಸ್ವದೇಶಿ ಭಂಡಾರವಿದೆಯೇ?

ನಿಮ್ಮ ಊರಿನಲ್ಲೂ ಸ್ವದೇಶಿ ಭಂಡಾರ ತೆರೆಯಬೇಕೇ? ಇದು ಬಹಳ ಸುಲಭ. ಹೆಚ್ಚಿನ ಬಂಡವಾಳವಿಲ್ಲದೇ ನೀವೂ ಪ್ರಾರಂಭಿಸಬಹುದು. ಸಲಹೆ ಹಾಗೂ ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ:

**ಶ್ರೀ ಜಗದೀಶ್,** ಪ್ರಾಂತಸಂಘಟನಾ ಕಾರ್ಯದರ್ಶಿ
ಸ್ವದೇಶಿ ಜಾಗರಣ್ ಮಂಚ್, ಕರ್ನಾಟಕ.
ಮೊಬೈಲ್: 9448846035


**ಶ್ರೀ ವಿಶ್ವನಾಥ್,** ಮಾಲಿಕರು, ಸ್ವದೇಶಿ ಭಂಡಾರ, ತುಮಕೂರು
ಮೊಬೈಲ್: 9900733556

## ಸಾಲುದ್ದದ ಸುದ್ದಿಗಳು

- **ತಮಿಳು ನಾಡು ರಾಜ್ಯದ ಪುಡುಕೊಟ್ಟೈ ಜಿಲ್ಲೆಯ ಇಲ್ಲುಪುರ ಎಂಬ ಪಟ್ಟಣ ಪಂಚಾಯತಿಯು ಸುಮಾರು ಹದಿನೇಳು ವರ್ಷಗಳಿಂದ ನೂರು ಪ್ರತಿಶತ ಆದಾಯ ತೆರಿಗೆ ಸಂಗ್ರಹಿಸುತ್ತಿದೆ. ಕೃಷಿಕರೇ ಹೆಚ್ಚಿರುವ ಇಲ್ಲುಪುರದಲ್ಲಿ ಕಳೆದ ಸತತ 17 ವರ್ಷಗಳಿಂದ ಎಲ್ಲರೂ ತೆರಿಗೆ ಪಾವತಿಸುತ್ತಿದ್ದಾರೆ. ದೇಶದ ಬೆಳವಣಿಗೆಗೆ ಆದಾಯ ತೆರಿಗೆಯ ಪಾತ್ರವನ್ನು ಅರಿತಿರುವ ಈ ಪಟ್ಟಣ ಪಂಚಾಯತಿ ವ್ಯಾಪ್ತಿಯ ಸುಮಾರು 5000 ತೆರಿಗೆದಾರರಿಂದ ರೂ 17 ಲಕ್ಷ ಆಸ್ತಿ ತೆರಿಗೆ ಹಾಗೂ ರೂ 4 ಲಕ್ಷ ವೃತ್ತಿ ತೆರಿಗೆಯನ್ನು ಸಂಗ್ರಹಿಸಲಾಗಿದೆ.**
- ಬೆಂಗಳೂರಿನ ದೊಡ್ಡಬಳ್ಳಾಪುರದ ಬಳಿ ಇರುವ ಹಸಕೂರು ಗ್ರಾಮದಲ್ಲಿ ಮಾಲ್ಟೋಸ್ ಅಗ್ರಿ ಪ್ರಾಡಕ್ಟ್ಸ್ (ಎಂಎಪಿಪಿಎಲ್) ಎಂಬ ಸಂಸ್ಥೆಯು ನಗರದ ಹೋಟೇಲುಗಳ ತ್ಯಾಜ್ಯವನ್ನು ಬಳಸಿಕೊಂಡು ಬಯೋ ಸಿ.ಎನ್.ಜಿ ಯನ್ನು ಉತ್ಪಾದಿಸುತ್ತಿದ್ದು ಹೊಟೇಲುಗಳಿಗೆ ದಿನದಲ್ಲಿ 600 ಕೆ.ಜಿಯಷ್ಟು ಅನಿಲವನ್ನು ಪೋರಯಸುತ್ತಿದೆ. ಹೊಟೇಲುಗಳಿಂದ ತ್ಯಾಜ್ಯವನ್ನು ಬೃಹತ್ ಲಾರಿಗಳಲ್ಲಿ ಇಲ್ಲಿಗೆ ತಂದ ನಂತರ, ಸಗಣಿಯ ಜೊತೆ ಸೇರಿಸಿ ಗೋಬರ್‌ಗ್ಯಾಸ್ ಪ್ಲಾಂಟ್‌ಗಳಲ್ಲಿ ಅನಿಲವನ್ನು ಉತ್ಪಾದಿಸಲಾಗುತ್ತಿದ್ದು ಅವನ್ನು ಸಿಲಿಂಡರುಗಳಿಗೆ ತುಂಬಿ ಹೋಟೆಲುಗಳಿಗೆ ನೀಡಲಾಗುತ್ತದೆ. ಇತ್ತೀಚೆಗಷ್ಟೇ ಒಂದು ವರ್ಷವನ್ನು ಪೂರೈಸಿದ ಈ ಘಟಕ ದಕ್ಷಿಣ ಭಾರತದ ಬಯೋ ಸಿ.ಎನ್.ಜಿ. ಉತ್ಪಾದಿಸುವ ಮೊದಲ ಕೇಂದ್ರವಾಗಿದೆ.




- **ಉತ್ತರಪ್ರದೇಶ ರಾಜ್ಯದ ಲಖನೌನಲ್ಲಿರುವ ಕೆಜಿಬಿವಿ ಎಂಬ ಶಾಲೆಯ ಮೂಲ ಉದ್ದೇಶವೇ ಬಡ, ಶಾಲೆ ತೊರೆದ ಹೆಣ್ಣು ಮಕ್ಕಳಿಗೆ ಉನ್ನತವಾದ ಶಿಕ್ಷಣವನ್ನು ನೀಡುವುದಾಗಿದೆ. ಇತ್ತೀಚೆಗೆ ಈ ಶಾಲೆಯು ಸ್ಥಳಾಂತರವಾದ ಕಟ್ಟಡದಲ್ಲಿ ಮಕ್ಕಳಿಗೆ ಆಡಲೂ ಜಾಗವಿರಲಿಲ್ಲ. ಬಳಸದೇ ಉಳಿದ ಜಾಗದಲ್ಲಿ ಪಾರ್ಥೆನಿಯಂ ಹುಲ್ಲು ಸ್ವಚ್ಛಂದವಾಗಿ ಬೆಳೆದಿತ್ತು. ಕಟ್ಟಡವೂ ರಸ್ತೆಯ ಮಟ್ಟಕ್ಕಿಂತಾ ಕೆಳಗಿನಲ್ಲಿ ನಿರ್ಮಿತವಾದದ್ದರಿಂದ ನೀರು ನುಗ್ಗುತ್ತಿತ್ತು. ಇವನ್ನೆಲ್ಲಾ ಮನಗಂಡ ಪ್ರಾಚಿ ಎಂಬ ಹೆಣ್ಣು ಮಗಳು ತನ್ನ ಶಾಲಾ ಸ್ನೇಹಿತರನ್ನು ಸೇರಿಸಿಕೊಂಡು ಆ ಜಾಗವನ್ನೆಲ್ಲಾ ಸ್ವಚ್ಛಗೊಳಿಸಿ ಬಳಕೆಗೆ ಯೋಗ್ಯಗೊಳಿಸುವ ಸಾಧನೆಗೈದಿದ್ದಾಳೆ. ಶಾಲೆಯಲ್ಲೀಗ ಆಡಲು ಜಾಗವಿದೆ; ಪುಟ್ಟ ಹೂದೋಟ, ತರಕಾರಿ ತೋಟ, ಹಾಗೂ ಕಾಂಪೋಸ್ಟ್ ಹೊಂಡಗಳನ್ನು ನಿರ್ಮಿಸಲು 8ನೆಯ ತರಗತಿಯಲ್ಲಿ ಓದುತ್ತಿರುವ ಪ್ರಾಚಿ ಶ್ರಮಿಸಿದ್ದಾಳೆ.**
- ಸಾವಯವ ಪದ್ಧತಿಯಲ್ಲಿ ಬೆಳೆದ ಹಿಪ್ಪುನೇರಳೆಯು ಒಳ್ಳೆಯ ಇಳುವರಿಯನ್ನು ನೀಡುವುದರ ಜೊತೆಗೆ ಅದರಿಂದ ಉತ್ತಮ ಮಟ್ಟದ ರೇಷ್ಮೆ ಎಳೆಗಳೂ ತಯಾರಾಗುತ್ತವೆ ಎಂದು ಮೈಸೂರಿನ ಕೇಂದ್ರೀಯ ರೇಷ್ಮೆ ಹುಳು ಸಾಕಣೆ ಸಂಸ್ಥೆ ತಿಳಿಸಿದೆ. ಹಿಪ್ಪುನೇರಳೆಯ ಎಲೆಗಳ ಮೇಲೆ ಉಳಿದುಕೊಳ್ಳುವ ರಾಸಾಯನಿಕ ಅಂಶದಿಂದ ರೇಶ್ಮೆ ಹುಳಗಳ ಬೆಳವಣಿಗೆ ಕುಂಠಿತವಾಗುತ್ತದೆ. ಉಳಿದ ಎಲೆಗಳು ಹಾಗೂ ಹುಳುಗಳು ತಿಂದುಳಿದ ಕಡ್ಡಿಗಳನ್ನು ಕಾಂಪೋಸ್ಟ್ ಆಗಿಬಳಸುವ ಬಗ್ಗೆಯೂ ಸಹ ಕೇಂದ್ರೀಯ ರೇಷ್ಮೆ ಹುಳು ಸಾಕಣೆ ಸಂಸ್ಥೆಯು ರೈತರಲ್ಲಿ ಅರಿವನ್ನು ಮೂಡಿಸುತ್ತಿದೆ.
- **ಉಡುಪಿಯಲ್ಲಿ ಸುಸಿ ಗ್ಲೋಬಲ್ ಸಂಶೋಧನಾ ಕೇಂದ್ರದ ವತಿಯಿಂದ ಸಮುದ್ರದ ಅಲೆಗಳಿಂದ ವಿದ್ಯುತ್ತನ್ನು ಉತ್ಪಾದಿಸುವ ಯಂತ್ರವನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಈ ವಿಧಾನದಲ್ಲಿ ಏಳು ಅಡಿ ಎತ್ತರದ ಪಿಲ್ಲರ್ ಅಳವಡಿಸಿ ಎರಡುವರೆ ಅಡಿ ವ್ಯಾಸ, ನಾಲ್ಕು ಅಡಿ ಉದ್ದದ ಒಂದು ಡ್ರಮ್ ಒಂದನ್ನು ನೀರಿನಲ್ಲಿ ತೇಲಿಸಲಾಗುತ್ತದೆ. ಸಮುದ್ರದಲ್ಲಿ ಬಂದು ಬಡಿಯುವ ಅಲೆಗಳಿಂದ ಸಿಗುವ ಶಕ್ತಿಯಿಂದ ಯಂತ್ರಗಳನ್ನು ತಿರುಗಿಸಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ಈ ವಿಷಯವಾಗಿ 2005ರಲ್ಲಿ ಪೇಟೆಂಟ್ ಪಡೆದ ವಿಜಯಕುಮಾರ್ ಹೆಗ್ಡೆ ಒಂದು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಯೋಜನೆಗೆ ಅಂದಾಜು 6 ಕೋಟಿ ವೆಚ್ಚ ತಗುಲುತ್ತದೆ, ಪರಿಸರ ಮಾಲಿನ್ಯರಹಿತ ಈ ಮಾರ್ಗವನ್ನು ಆರ್ಥಿಕವಾಗಿಯೂ ಲಾಭದಾಯಕವಾಗಿ ಬಳಸಬಹುದು ಎಂದು ಅಭಿಪ್ರಾಯಪಡುತ್ತಾರೆ.**
- ಸ್ತನ ಕ್ಯಾನ್ಸರ್ ನಿಂದ ಬಳಲುವ ಮಹಿಳೆಯರ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಲಕ್ಷಣಗಳು ತಡವಾಗಿ ತಿಳಿಯುವುದು ಮತ್ತು ಕಾರಣಾಂತರಗಳಿಂದ ಸಮಯಕ್ಕೆ ಸರಿಯಾದ ಚಿಕಿತ್ಸೆ ದೊರೆಯದ ಕಾರಣದಿಂದ ಗುಣಪಡಿಸಬಹುದಾದ ಕಾಯಿಲೆಯಾದರೂ ಸ್ತನಕ್ಯಾನ್ಸರ್‌ಗೆ ಅನೇಕ ಮಹಿಳೆಯರು ಬಲಿಯಾಗಿದ್ದಾರೆ. ನೆದರ್ಲ್ಯಾಂಡ್ಸ್ ನ ಟ್ವೆಂಟ್ ವಿಶ್ವವಿದ್ಯಾಲಯದ ಭಾರತ ಮೂಲದ ಪ್ರೊ ಶ್ರೀರಂಗ ಮನೋಹರ್ ಸ್ತನಕ್ಯಾನ್ಸರನ್ನು ಸುಲಭವಾಗಿ ಪತ್ತೆಹಚ್ಚಬಲ್ಲ ಹೊಸ ಯಂತ್ರವನ್ನು ತಯಾರಿಸಿದ್ದಾರೆ. ಪ್ರಸ್ತುತ ಇರುವ ಮಾಮೊಗ್ರಾಫ್ಗಳು ಎಕ್ಸ್ ರೇ ತರಂಗಗಳನ್ನು ಬಳಸಿದರೆ, ನೂತನವಾಗಿ ರಚಿತವಾದ ಈ ಫೋಟೋ ಅಕೌಸ್ಟಿಕ್ ಮಾಮೋಸ್ಕೋಪ್ (ಪಿಎಎಂ) ಯಂತ್ರವನ್ನು ಬಳಸಿ ಇನ್ಫ್ರಾ ರೆಡ್, ಅಲ್ಟ್ರಾ ಸೌಂಡ್ ತರಂಗಗಳನ್ನು ಬಳಸಿಕೊಂಡು ಸ್ಥನದ 3ಡಿ ಚಿತ್ರ ತೆಗೆದು, ಸುಲಭವಾಗಿ ಸ್ತನ ಕ್ಯಾನ್ಸರ್‌ನ್ನು ಪತ್ತೆಹಚ್ಚಬಹುದಾಗಿದೆ.




- **ನಗರಗಳು ಕಾಂಕ್ರೀಟ್ ಜಂಗಲ್‌ಗಳಾಗುತ್ತಿರುವ ಸಂದರ್ಭದಲ್ಲಿ, ಬೆಂಗಳೂರಿನ ನಿವಾಸಿ ಶುಭೇಂದು ಶರ್ಮಾ ನಗರಗಳ ನಿಬಿಡ ಪ್ರದೇಶಗಳಲ್ಲೂ ಕಾಡು ಬೆಳೆಸುವ ಕಾಯಕಕ್ಕೆ ಮುಂದಾಗಿದ್ದಾರೆ. ಇತ್ತೀಚೆಗೆ 'ನಮ್ಮ ಬೆಂಗಳೂರು' ಪ್ರಶಸ್ತಿ ವಿಜೇತರಾದ ಇವರು ಮನೆ, ಫ್ಯಾಕ್ಟರಿ, ಸುತ್ತಲಿನ ಪುಟ್ಟ ಜಾಗ ರಸ್ತೆ ಮಧ್ಯೆ ಇರುವ ಡಿವೈಡರ್, ಅಥವಾ ಬರಡು ಭೂಮಿ ಮುಂತಾದ ಕಡೆಗಳಲ್ಲಿ ಮರಗಳನ್ನು ಬೆಳೆಸಲು ಸಾಧ್ಯ ಎಂದು ತೋರಿಸುತ್ತಾರೆ. ಎಫಾರೆಸ್ಟ್ ಎನ್ನುವ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಒಂದು ಕಾಡನ್ನು ನಿರ್ಮಿಸಲು 1000 ಚದರ ಅಡಿಗಳು ಸಾಕು ಎಂದು ವಾದಿಸುವ ಇವರು, ಹುಲ್ಲು ಹಾಸು ಬೆಳೆಸುವುದರಿಂದ ನೋಡಲು ಅಂದವಾಗಿ ಕಂಡರೂ ಪರಿಸರಕ್ಕೆ ಸಿಗುವ ಲಾಭ ಕಡಿಮೆಯೇ, ಹಾಗೂ ಈ ಹುಲ್ಲನ್ನು ಬೆಳೆಸಲು ಹೆಚ್ಚು ನೀರಿನ ಅಗತ್ಯವೂ ಇದೆ. ಆದ್ದರಿಂದ ಅದೇ ಜಾಗದಲ್ಲಿ ಕಡಿಮೆ ವೆಚ್ಚ ತಗಲುವ ಕಾಡಿನ ನಿರ್ಮಾಣ ಸಾಧ್ಯ. ಎಫಾರೆಸ್ಟ್ ಸಂಸ್ಥೆಯು ಭಾರತದ 13 ನಗರಗಳಲ್ಲಿ ಈವರೆಗೆ ಸುಮಾರು 60,000 ಮರಗಳನ್ನು, 48 ಚಿಕ್ಕ ಕಾಡುಗಳನ್ನು ಬೆಳೆಸಿದೆ ಅನೇಕರನ್ನು ಪ್ರಚೋದಿಸಿದೆ.**
- ಉತ್ತರ ಪ್ರದೇಶ ರಾಜ್ಯದ ರಾಮಪುರ ಎಂಬ ಹಳ್ಳಿಯಲ್ಲಿ ಇತ್ತೀಚೆಗೆ ವಾಲ್ಮೀಕಿ ಸಮುದಾಯದ 800 ಮಂದಿ ಹಿಂದುತ್ವದಿಂದ ಇಸ್ಲಾಮ್ ಗೆ ಮತಾಂತರಗೊಂಡ ಘಟನೆ ಇತ್ತೀಚೆಗೆ ನಡೆದಿದೆ. ಉತ್ತರ ಪ್ರದೇಶದ ಸಚಿವ ಆಜ಼ಾಮ್ ಖಾನ್‌ರ ಅಣತಿಯಂತೆ ಅಲ್ಲಿನ ಮನೆಗಳನ್ನು ಉರುಳಿಸಿ ಬಹು ಮಳಿಗೆ ಕಟ್ಟಡ ಕಟ್ಟುವುದಾಗಿ ಹೇಳಿದ್ದ ಅಧಿಕಾರಿಗಳು ವಾಲ್ಮೀಕಿಗಳ ಮನೆಗಳನ್ನು ಗುರುತಿಸಿದ್ದರು. ತಮ್ಮ ಮನೆಗಳನ್ನು ಉಳಿಸಿಕೊಳ್ಳುವ ಭಯ ಮತ್ತು ಅನಿವಾರ್ಯತೆಯಿಂದ ಅಂಬೇಡ್ಕರರ 124 ನೇ ಜನ್ಮ ದಿನದಂದೇ ಈ ಹಿಂದುಳಿದ ವರ್ಗದ ಕುಟುಂಬಗಳು ಮತಾಂತರವಾಗಿವೆ. ಹಿಂದೂಗಳನ್ನು ಮತಾಂತರಗೊಳಿಸಿಕೊಳ್ಳುವ ಸಮಾಚಾರಗಳು ಯಾರಿಗೂ ಕಾಣದೇ ಅನೂಚಾನವಾಗಿ ನಡೆಯುತ್ತಿದ್ದರೂ ಘರ್‌ವಾಪಸಿಯ ಬಗ್ಗೆ ದೊಡ್ಡದಾಗಿ ಗದ್ದಲವೆಬ್ಬಿಸಿದ್ದ ಯಾವುದೇ ಜಾತ್ಯತೀತ ಬುದ್ಧಿಜೀವಿಗಳು ತುಟಿ ಬಿಚ್ಚದೇ ಕುಳಿತಿರುವುದು ಆಶ್ಚರ್ಯಕರ ಸಂಗತಿಯೇನೂ ಅಲ್ಲ.

## Janam ರಾಷ್ಟ್ರೀಯ ವಿಚಾರಗಳ ಪ್ರಸಾರಕ್ಕೆ 'ಜನಂ ಟಿವಿ' ಕಾರ್ಯಾರಂಭ

ಮನೋರಂಜನೆ ಹಾಗೂ ಸುದ್ದಿ ಎರಡನ್ನೂ ಬಿತ್ತರಿಸುವ ಮಲೆಯಾಳಂ ಭಾಷೆಯ ಹೊಸ ಟಿವಿ ವಾಹಿನಿ 'ಜನಂ ಟಿವಿ' ಆರಂಭವಾಗಿದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಪ್ರಚುರಪಡಿಸುವ ಮಹತ್ವದ ಉದ್ದೇಶದಿಂದ ಕೆಲವು ದೇಶಪ್ರೇಮಿ ನಾಗರಿಕರು ಆರಂಭಿಸಿರುವ ಜನಂ ಟಿವಿ ಚಾನೆಲ್ ಮನೋರಂಜನೆ ಹಾಗೂ ಸುದ್ದಿ ಎರಡಕ್ಕೂ ಆದ್ಯತೆ ಕೊಡಲಿದೆ. ಇನ್ನೊಂದು ವಿಶೇಷವೆಂದರೆ ಜನಂ ವಾಹಿನಿಯು ಸಂಸ್ಕೃತದಲ್ಲೂ ಸುದ್ದಿ ನೀಡಲಿದ್ದು ಸಂಸ್ಕೃತದಲ್ಲಿ ಸುದ್ದಿ ನೀಡುವ ಮೊದಲ ಖಾಸಗಿ ವಾಹಿನಿಯಾಗಲಿದೆ.

ಏಪ್ರಿಲ್ 19ರಂದು ಕೊಚ್ಚಿನ್‌ನಲ್ಲಿ ನಡೆದ ಚಾನೆಲ್‌ನ ಉದ್ಘಾಟನೆಯನ್ನು ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ್ ನೆರವೇರಿಸಿದರು. ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ರಾಜ್ಯವರ್ಧನ್ ಸಿಂಗ್ ರಾಥೋಡ್ ಚಾನೆಲ್‌ನ ಐಡಿಯನ್ನು ಅನಾವರಣಗೊಳಿಸಿದರು. ಸಮಾರಂಭದಲ್ಲಿ ಆರೆಸ್ಸೆಸ್ ಸರಕಾರ್ಯವಾಹ ಭೈಯಾಜಿ ಜೋಷಿ, ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಮ್ ಮಾಧವ್, ಸ್ವಾಮಿ ಪೂರ್ಣಾನಂದ ಪುರಿ, ಚಾನೆಲ್‌ನ ಮುಖ್ಯಸ್ಥ ಹಾಗೂ ಚಿತ್ರ ನಿರ್ದೇಶಕ ಪ್ರಿಯದರ್ಶನ್, ಎಂಡಿ ವಿಶ್ವರೂಪನ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಜನಂ ವಾಹಿನಿಯ ಆರಂಭದೊಂದಿಗೆ ಕೇರಳ ರಾಜ್ಯದ ಮಾಧ್ಯಮ ಜಗತ್ತಿನಲ್ಲಿ ಬದಲಾವಣೆಯ ಗಾಳಿ ಬೀಸುವ ಲಕ್ಷಣಗಳು ಗೋಚರಿಸುತ್ತಿವೆ.

पुंगव PUNGAVA

# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT PSO BENGALURU-560 026 on 10/25 of every Month REG.NO.CPMG/KA/BGS/102/2015-17

1-5-2015



# ಜಮ್ಮು ಕಾಶ್ಮೀರ: ಪ್ರತ್ಯೇಕತಾವಾದಿ ಮಸರತ್ ಅಲಂ ಬಿಡುಗಡೆ, ಬಂಧನ


2010ರಲ್ಲಿ ನಡೆದ ಕಲ್ಲು ತೂರಾಟದ ಪಿತೂರಿ ನಡೆಸಿದ್ದಕ್ಕಾಗಿ ಪ್ರತ್ಯೇಕತಾವಾದಿ ನಾಯಕ ಮಸರತ್‌ಅಲಂನನ್ನು ಸಾರ್ವಜನಿಕ ಸುರಕ್ಷತಾಕಾಯ್ದೆಯ ಪ್ರಕಾರ ನಾಲ್ಕು ವರ್ಷಗಳ ಹಿಂದೆಯೇ ಬಂಧಿಸಿತ್ತು ಅಂದಿನ ನ್ಯಾಷನಲ್ ಕಾನ್ಫರೆನ್ಸ್ ಸರ್ಕಾರ. ಕೋರ್ಟು ಅವನ ಬಂಧನದ ಅವಧಿಯನ್ನು ವಿಸ್ತರಿಸುವುದು ಮತ್ತು ಸರ್ಕಾರ ಅದನ್ನು ಅನುಮೋದಿಸುವುದೂ ನಡೆದಿತ್ತು ನಾಲ್ಕು ವರ್ಷಗಳ ಕಾಲ. 2014ರ ಸೆಪ್ಟೆಂಬರ್‌ನಲ್ಲಿ ಅಂದಿನ ನ್ಯಾಷನಲ್ ಕಾನ್ಫರೆನ್ಸ್ ಸರ್ಕಾರವು ಆತನ ಬಂಧನವನ್ನು ಮುಂದುವರಿಸಲು ಯಾವುದೇ ಕಾರಣಗಳಿಲ್ಲವೆಂದು ಹೇಳಿತು. ಈ ಪ್ರಕರಣ ಸುಪ್ರೀಂಕೋರ್ಟಿನಲ್ಲಿ ಮುಂದುವರಿದು 2015ರ ಮಾರ್ಚ್‌ನಲ್ಲಿ ಮಸರತ್ ಪರವಾಗಿ ತೀರ್ಪು ಬಂದಿದ್ದರಿಂದ ಜಮ್ಮು ಕಾಶ್ಮೀರದ ಪಿಡಿಪಿ–ಬಿಜೆಪಿ ಸರ್ಕಾರ ಆತನನ್ನು ಬಿಡುಗಡೆಗೊಳಿಸಬೇಕಾಯಿತು. ಈ ಬಗ್ಗೆ ಪಾಲುದಾರ ಪಕ್ಷವಾದ ಬಿಜೆಪಿಯ ಜೊತೆ ಚರ್ಚೆ ಕೂಡಾ ಮಾಡದೇ ಏಕಪಕ್ಷೀಯ ನಿರ್ಧಾರ ಕೈಗೊಂಡರು ಮುಖ್ಯಮಂತ್ರಿ ಮುಫ್ತಿ ಮಹಮದ್ ಸಯೀದ್. ಕೇಂದ್ರ ಗೃಹ ಸಚಿವಾಲಯ ಜಮ್ಮು ಕಾಶ್ಮೀರ ಸರ್ಕಾರದ ಬಳಿ ಈ ಬಗ್ಗೆ ಸ್ಪಷ್ಟೀಕರಣ ಕೇಳಿದ್ದಲ್ಲದೇ, ಈತನ ಚಟುವಟಿಕೆಗಳ ಬಗ್ಗೆ ತೀವ್ರ ನಿಗಾ ಇಡುವಂತೆಯೂ, ಶಾಂತಿಗೆ ಭಂಗ ಬರುವಂತಹ ಚಟುವಟಿಕೆ ನಡೆಸಿದರೆ ಆತನನ್ನು ಬಂಧಿಸುವಂತೆಯೂ, ಹಾಗೂ ಈಗಾಗಲೇ ಆತನ ಮೇಲೆ ಇರುವ 27 ಕ್ರಿಮಿನಲ್ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ವಿಚಾರಣೆ ನಡೆಸುವಂತೆಯೂ ಸೂಚಿಸಿತ್ತು.

ಬಿಡುಗಡೆಯಾದ ಬಳಿಕ ಆತ ಸುಮ್ಮನೇ ಕೂರಲು ಸಾಧ್ಯವೇ? ಸೇನಾಪಡೆಯೊಂದಿಗೆ ನಡೆದ ಘರ್ಷಣೆಯಲ್ಲಿ ಒಬ್ಬ ಯುವಕ ಸತ್ತಿದ್ದನ್ನು ನೆಪವಾಗಿಟ್ಟುಕೊಂಡು ಬೃಹತ್ ಪ್ರತಿಭಟನೆಯನ್ನು ಆಯೋಜಿಸಿದ. ಇನ್ನೊಬ್ಬ ಪ್ರತ್ಯೇಕತಾವಾದಿ ನಾಯಕ ಸೈಯದ್ ಅಲಿ ಶಾ ಗಿಲಾನಿಯೂ ಅದರಲ್ಲಿ ಭಾಗವಹಿಸಿದ್ದ. ಈ ಪ್ರತಿಭಟನೆಯಲ್ಲಿ ಪಾಕಿಸ್ತಾನದ ಧ್ವಜಗಳನ್ನು ಪ್ರದರ್ಶಿಸಲಾಯಿತು. ಪಾಕಿಸ್ತಾನದ ಪರವಾದ ಘೋಷಣೆಯನ್ನೂ ಕೂಡಾ ಕೂಗಿದ ಮಸರತ್ ಅಲಂ. ಇದು ಜಮ್ಮು ಕಾಶ್ಮೀರದ ಜನರ ಮನದ ಇಚ್ಛೆಯನ್ನು ತೋರಿಸುತ್ತದೆ ಎಂದು ಪ್ರತಿಕ್ರಿಯಿಸಿತು ಪಾಕಿಸ್ತಾನ! ಸೇನಾಪಡೆಗಳ ಮೇಲೆ ಕಲ್ಲು ತೂರಾಟವನ್ನೂ ನಡೆಸಿದರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮುಸ್ಲಿಮರು. ಈ ಬಾರಿ, ಸರ್ಕಾರದಲ್ಲಿ ಭಾಗಿಯಾಗಿದ್ದ ಬಿಜೆಪಿ ಎಚ್ಚರದ ಹೆಜ್ಜೆಯಿಟ್ಟಿತು. ಅದರ ಪರಿಣಾಮವಾಗಿ, ಮುಂದಿನ ರ್‍ಯಾಲಿಗಳಲ್ಲಿ ಭಾಗವಹಿಸದಂತೆ ಆತನಿಗೆ ಗೃಹಬಂಧನ ವಿಧಿಸಲಾಯಿತು.

ಮಸರತ್ ಅಲಂ ಬಿಡುಗಡೆಯಾದಂದಿನಿಂದಲೂ ಆತನನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಗುಪ್ತಚರ ಇಲಾಖೆ ಜಮ್ಮು ಕಾಶ್ಮೀರದಲ್ಲಿ ಹಿಂಸಾತ್ಮಕ ಚಟುವಟಿಕೆಗಳನ್ನು ನಡೆಸುವ, ಶಾಂತಿಯಿಂದಿದ್ದ ಜನರನ್ನು ಪ್ರಚೋದಿಸುವ ಈತನ ಯೋಜನೆಗಳ ಬಗ್ಗೆ ಕೇಂದ್ರ ಗೃಹ ಇಲಾಖೆಗೆ ಮಾಹಿತಿ ಒದಗಿಸಿತು. ತಕ್ಷಣವೇ ಗೃಹ ಸಚಿವರಾಜನಾಥ್ ಸಿಂಗ್ ಅವರು ಮುಖ್ಯಮಂತ್ರಿ ಮುಫ್ತಿ ಮಹಮದ್ ಸಯೀದ್ ಅವರೊಂದಿಗೆ ಮಾತನಾಡಿ ಈತನನ್ನು ಬಂಧಿಸುವಂತೆ ಸೂಚಿಸಿದರು. ಪರಿಣಾಮವಾಗಿ ಕಳೆದ ವಾರ ನಿಷೇಧಿತ ಚಟುವಟಿಕೆ ನಡೆಸಿದ ಆರೋಪದ ಮೇಲೆ ಆತನನ್ನು ಪೊಲೀಸರು ಬಂಧಿಸಿದರು.

ಅಲ್ಲಿಗೆ, ಜಮ್ಮು ಕಾಶ್ಮೀರದಲ್ಲಿ ನಡೆಯಬೇಕಿದ್ದ ಇನ್ನೊಂದು ಬೃಹತ್ ಹಿಂಸಾಚಾರವೊಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಸಕಾಲದಲ್ಲಿ ಸೂಕ್ತ ನಿರ್ದೇಶನ ನೀಡಿದ್ದರಿಂದ ತಪ್ಪಿದ ಹಾಗಾಗಿದೆ. ಇದರಿಂದ ಪ್ರತ್ಯೇಕತಾವಾದಿಗಳಿಗೆ ಸ್ಪಷ್ಟ ಸಂದೇಶವೊಂದು ಹೋಗಿದೆ. ದೇಶದ್ರೋಹಿಗಳಿಗೆ ಭಾರತದಲ್ಲಿ ಸ್ಥಾನವಿಲ್ಲ ಎಂಬುದು ಅವರಿಗೆ ಅರ್ಥವಾಗಲು ಪ್ರಾರಂಭವಾಗಿದೆ. ಕಳೆದ ಬಾರಿ ಬಂಧಿಸಿದ ಹಾಗೆ, ಈ ಬಾರಿ ಮುಂಜಾಗ್ರತಾ ಕ್ರಮವಾಗಿ ಬಂಧಿಸಿಲ್ಲ. ಸ್ಪಷ್ಟ ಪ್ರಕರಣವೊಂದರಲ್ಲಿ ನಡೆಸಿದ ಪ್ರಚೋದನಾತ್ಮಕ ನಡೆಯಂತಹ ಕಾನೂನು ಉಲ್ಲಂಘನೆಯ ಆರೋಪ ಹೊರಿಸಿ ಬಂಧಿಸಲಾಗಿದೆ. ಹಾಗಾಗಿ, ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳುವುದು ಈತನಿಗೆ ಅಷ್ಟು ಸುಲಭವಾಗಲಾರದು.

ಇಷ್ಟಕ್ಕೇ ಇದು ನಿಲ್ಲಬಾರದು. ಕೇಂದ್ರ ಸರ್ಕಾರ ಈಗಾಗಲೇ ಘೋಷಿಸಿರುವಂತೆ, ಕಾಶ್ಮೀರಿ ಹಿಂದುಗಳಿಗೆ ಪುನರ್ವಸತಿಯನ್ನು ಕಾಶ್ಮೀರದಲ್ಲೇ ಮಾಡಬೇಕು. ಇದಕ್ಕಾಗಿ ಜಾಗ ಗುರುತಿಸುವ ಕೆಲಸವನ್ನು ಚುರುಕುಗೊಳಿಸಬೇಕು. ಹಿಂದುಗಳು ಮರಳಿ ಕಾಶ್ಮೀರಿ ಕಣಿವೆಗೆ ಬರುವುದನ್ನು ಜೀರ್ಣಿಸಿಕೊಳ್ಳಲು ಅಲ್ಲಿನ ಪ್ರತ್ಯೇಕತಾವಾದಿಗಳಿಗೆ ಸಾಧ್ಯವಾಗುತ್ತಿಲ್ಲ. ಈಗಾಗಲೇ ಇದರ ಬಗ್ಗೆ ಅವರು ಅಪಸ್ವರ ಎತ್ತಿದ್ದಾರೆ. ಆದರೆ, ಸರ್ಕಾರ ತನ್ನ ನಿಲುವು ಬದಲಿಸದೇ ಯೋಜನೆಯನ್ನು ಕಾರ್ಯಗತಗೊಳಿಸಬೇಕಿದೆ. ಅಲ್ಲದೇ, ಪ್ರತ್ಯೇಕತೆಯ ಕೂಗೆಬ್ಬಿಸುವವರನ್ನು ಮುಲಾಜಿಲ್ಲದೇ ಕಂಬಿಯೆಣಿಸುವಂತೆ ಮಾಡಬೇಕಿದೆ.



ಸರ್ಕಾರ ಮಾತ್ರವಲ್ಲ ಜನರ ಪಾತ್ರವೂ ಇದರಲ್ಲಿ ಮಹತ್ತ್ವದ್ದು. ಪಾಕಿಸ್ತಾನದ ಧ್ವಜ ಪ್ರದರ್ಶಿಸುವವರಿಗೂ ಪಾಕಿಸ್ತಾನದ ಪರ ಘೋಷಣೆ ಕೂಗುವವರಿಗೂ ಇಲ್ಲಿ ಜಾಗವಿಲ್ಲವೆಂಬ ಸಂದೇಶ ಇಡೀ ದೇಶದೆಲ್ಲೆಡೆಯಿಂದ ಪ್ರತ್ಯೇಕತಾವಾದಿಗಳಿಗೆ ಹೋಗಬೇಕು. ಇಂತಹ ಘಟನೆಗಳು ನಡೆದಾಗ ದೇಶದೆಲ್ಲೆಡೆ ಪ್ರತಿಭಟನೆ ನಡೆಸುವ ಮೂಲಕ ಸ್ಪಷ್ಟ ಸಂದೇಶವನ್ನು ನೀಡುವುದು ದೇಶಭಕ್ತರ ಒಂದು ಜವಾಬ್ದಾರಿಯೂ ಹೌದು.

# ವಿಶ್ವವನ್ನೇ ನಿಬ್ಬೆರಗಾಗಿಸಿದ 'ಆಪರೇಶನ್ ರಾಹತ್'

ಇಸ್ಲಾಮಿನ ಎರಡು ಪ್ರಮುಖ ಪಂಗಡಗಳಾದ ಶಿಯಾ ಹಾಗೂ ಸುನ್ನಿ ನಡುವಿನ ಒಳ ಜಗಳ, ಜಿದ್ದು, ಯುದ್ಧ ಯೆಮೆನ್ ನಲ್ಲಿ 2011 ರಿಂದ ಕಾಣಿಸತೊಡಗಿತ್ತು. ಸೌದಿ ಅರೇಬಿಯಾ ತನ್ನ ಸತತ ದಾಳಿಯನ್ನು ಮಾಡುತ್ತಲೇ ಇತ್ತು. ಆದರೆ ಯೆಮೆನ್ ನಲ್ಲಿ ಸಿಲುಕಿಕೊಂಡಿದ್ದ ಭಾರತೀಯ ಮೂಲದ ನಿವಾಸಿಗಳಿಗೆ ಯಾವುದೇ ರೀತಿಯಿಂದಲೂ ಯೆಮೆನ್ ನಿಂದ ಹೊರ ಬರಲು ಆಗುತ್ತಿರಲಿಲ್ಲ. ಭಾರತೀಯರನ್ನು ರಕ್ಷಿಸಲು 'ಆಪರೇಷನ್ ರಾಹತ್' ಎಂಬ ಕಾರ್ಯಾಚರಣೆ ಆರಂಭಿಸಲಾಯಿತು. ಹಿಂದಿ ಭಾಷೆಯಲ್ಲಿ 'ರಾಹತ್' ಪದದ ಅರ್ಥ 'ಪರಿಹಾರ' ಎಂದು. ನಿವೃತ್ತ ಸೇನಾಧಿಕಾರಿ ಸಚಿವ ಜೆನರಲ್ ವಿ.ಕೆ. ಸಿಂಗ್ ಇದರ ನೇತೃತ್ವ ವಹಿಸಿದರು. ಯೆಮೆನ್ ನಲ್ಲಿ ಸಿಲುಕಿಕೊಂಡಿದ್ದವರು ಎಷ್ಟೋ ಜನ ಸಚಿವೆ ಸುಷ್ಮಾ ಸ್ವರಾಜರನ್ನು ನೇರವಾಗಿ ಟ್ವೀಟ್ ಮಾಡುವ ಮೂಲಕವೇ ಸಹಾಯ ಕೇಳುತ್ತಿದ್ದರು. ಮಧ್ಯರಾತ್ರಿ ಬರುತ್ತಿದ್ದ ಟ್ವೀಟ್‌ಗಳನ್ನೂ ಗಮನಿಸಿ, ಉತ್ತರಿಸುತ್ತಿದ್ದ ಸುಷ್ಮಾ ಸ್ವರಾಜ್ ತಕ್ಷಣವೇ ಯೆಮೆನ್‌ನ ಭಾರತೀಯ ದೂತಾವಾಸ ಕಛೇರಿಯೊಂದಿಗೆ ಸಂಪರ್ಕದಲ್ಲಿದ್ದುಕೊಂಡು ರಕ್ಷಣಾ ಕಾರ್ಯವನ್ನು ನಿರ್ವಹಿಸುತ್ತಿದ್ದರು.



## ಆಪರೇಷನ್ ರಾಹತ್ ನಡೆದದ್ದು ಹೇಗೆ?

ಸುಷ್ಮಾ ಸ್ವರಾಜರ ಅಣತಿ ಮೇರೆಗೆ ಮಾರ್ಚ್ 27 ಕ್ಕೆ ವಿ.ಕೆ.ಸಿಂಗ್ ಯೆಮೆನ್‌ಗೆ ತೆರಳಿದರು. ಯೆಮೆನ್‌ನ ರಾಜಧಾನಿ ಸನಾ. ಆದರೆ ಸನಾದ ವಿಮಾನ ನಿಲ್ದಾಣ ಅದಾಗಲೇ ಸೌದಿ ಅರೇಬಿಯಾ ಹಿಡಿತಕ್ಕೆ ಬಂದಾಗಿತ್ತು. ಆದ ಕಾರಣ ಸನಾದಿಂದ ರಕ್ಷಣಾ ಕಾರ್ಯ ನಡೆಯುವುದು ಸಾಧ್ಯವಿಲ್ಲವಾದ್ದರಿಂದ, ಮಸ್ಕತ್ (ಸೌದಿ ಅರೇಬಿಯಾ) ದಲ್ಲಿ ಭಾರತದ ವಿಮಾನಗಳು ಇದ್ದವು. ಡಿಜಿಬೌಟಿ (Djibouti)ಗೆ ಮೊದಲು ಸೇರಿಕೊಂಡ ವಿ.ಕೆ.ಸಿಂಗ್ ತಮ್ಮ ಕೆಲಸಗಳನ್ನು ಅಲ್ಲಿಂದಲೇಚುರುಕುಗೆ ೞಳಿಸಿಕೊಂಡರು. ಪ್ರಧಾನಿ ನರೇಂದ್ರ ಮೋದಿಯವರು ಸೌದಿಯ ರಾಜ ಸಲ್ಮಾನ್‌ರನ್ನು ಮಾತನಾಡಿಸಿ 2 ಗಂಟೆಗಳ ಕಾಲ ಬಾಂಬು ಸಿಡಿತವನ್ನು ನಿಲ್ಲಿಸುವುದಕ್ಕಾಗೆ ಕೋರಿಕೊಂಡರು. ಈ ಕೋರಿಕೆಗೆ ಮಣಿದು ಬಾಂಬ್ ದಾಳಿ ಕ್ಷೀಣಿಸುತ್ತಿದ್ದಂತೆ ಆ ಸಮಯದಲ್ಲಿ ತೆರವು ಕಾರ್ಯವನ್ನು ಪ್ರಾರಂಭಿಸಿ ಮೊದಲ ತಂಡ ಭಾರತಕ್ಕೆ ಮರಳಿತು. ಭಾರತೀಯ ನೌಕಾದಳ ಮುಕಲ್ಲಾ, ಅಡಾನ್, ಹೊಡೈಡಾ ಬಂದರು ನಗರಗಳಿಂದ ಭಾರತೀಯರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿತ್ತು. ಒಟ್ಟಿನಲ್ಲಿ 4600 ಭಾರತೀಯರನ್ನು ಅತಿ ಕಡಿಮೆ ಸಮಯದಲ್ಲಿ ಯುದ್ಧಗ್ರಸ್ಥ ಯೆಮೆನ್ ನಿಂದ ರಕ್ಷಿಸಿ ಕೇರಳದ ಕೊಚಿಗೆ ಕರೆತರಲಾಯಿತು. ಹಾಗೆಂದು ಕೇವಲ ಭಾರತೀಯರನ್ನಷ್ಟೇ ಅಲ್ಲದೇ, ಶ್ರೀಲಂಕಾ, ಜರ್ಮನಿ, ಇಟಲಿ, ಅಮೇರಿಕಾ, ನೇಪಾಳ, ಬಾಂಗ್ಲಾದೇಶ, ಪಾಕಿಸ್ತಾನ ಸೇರಿದಂತೆ ಭಾರತದ ಸಹಾಯ ಯಾಚಿಸಿದ 26 ದೇಶಗಳಲ್ಲದೆ ಒಟ್ಟು 41 ರಾಷ್ಟ್ರಗಳ ನಾಗರಿಕರನ್ನು ಆಪರೇಷನ್ ರಾಹತ್ ರಕ್ಷಿಸಿದೆ. ಕಾರ್ಯಾಚರಣೆ ರಕ್ಷಿಸಿರುವ ವಿದೇಶಿಯರ ಸಂಖ್ಯೆ ವಿದೇಶಾಂಗ ಮಂತ್ರಾಲಯದ ಪ್ರಕಾರ 1200! ಆಪರೇಷನ್ ರಾಹತ್ ನಡೆಯುತ್ತಿದ್ದಾಗ ಕೈಹಿಸುಕಿಕೊಂಡ ಸೇನಾ ಸಬಲ ರಾಷ್ಟ್ರಗಳು ಯೆಮೆನ್ ನಲ್ಲಿ ಸಿಲುಕಿಕೊಂಡಿದ್ದ ತಮ್ಮ ದೇಶವಾಸಿಗಳಿಗೆ ಭಾರತ ನಡೆಸುತ್ತಿದ್ದ ಕಾರ್ಯಚರಣೆಯಲ್ಲಿ ತೊಡಗಿಸಿಕೊಳ್ಳಿ ಎಂದು ತಿಳಿಸಿತು. ಹಾಗೆ ರಕ್ಷಣಾಕಾರ್ಯ ಸಾಧನೆಯಾದಾಗ ಎಲ್ಲಾ ರಾಷ್ಟ್ರಗಳೂ ಮುಕ್ತ ಕಂಠದಿಂದ ಭಾರತವನ್ನು ಅದರ ಸಹಾಯವನ್ನು ಕೊಂಡಾಡಿವೆ. ಈ ಕಾರ್ಯಚರಣೆಯಲ್ಲಿ 3 ಸಿ–17, ಒಂದು ಬೋಯಿಂಗ್, 3 ಏರ್ ಬಸ್ ಗಳನ್ನು ಬಳಸಲಾಗಿತ್ತು. ಕಡೆಯ ಕ್ಷಣದವರೆಗೂ ಅಲ್ಲಿನ ಕುಂದುಕೊರತೆಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ, ಯೋಜನೆಗಳನ್ನು ತಯಾರಿಸಿ ಭಾರತಕ್ಕೆ ಮರಳಿದ ಕಡೆಯ ವಿಮಾನದಲ್ಲಿ ವಿ.ಕೆ ಸಿಂಗ್ ಮರಳಿದರು. ಈ ಬೃಹತ್ ಗಾತ್ರದ ತೆರವು ಕಾರ್ಯಾಚರಣೆ ಭಾರತದ ಪಾಲಿಗೆ ಒಂದು ದೊಡ್ಡ ಸಾಧನೆಯೇ. ಈ ಕಾರ್ಯಚರಣೆಯು ತನ್ನ ನಾಗರಿಕರ ರಕ್ಷಣೆ ಮಾತ್ರವಲ್ಲದೆ ವಿಶ್ವದ ಜನರ ರಕ್ಷಣೆಗೂ ಭಾರತ ಸದಾ ಸಿದ್ಧ ಎನ್ನುವುದನ್ನು ಮತ್ತೊಮ್ಮೆ ನಿರೂಪಿಸಿದೆ.

2ನೇ ಪುಟದಿಂದ

## ವಿಠಲಾಪುರದ ಕೃಷಿ ಸಾಧಕ ಕುಟುಂಬ

- ಗೋಬರ್‌ಗ್ಯಾಸ್, ಬಯೋಡೈಜೆಸ್ಟರ್, ಎರೆಗೊಬ್ಬರ ಘಟಕಕ್ಕೆ ಸೆಗಣಿ ಬಳಕೆಯಾಗುತ್ತದೆ. ವರ್ಷಕ್ಕೆ ಸರಾಸರಿ 30 ಟನ್ ಗೊಬ್ಬರ ಸಿಗುತ್ತೆ.
- ಕೊಟ್ಟಿಗೆಯಲ್ಲಿ ಕಾಯರ್‌ಪಿಟ್ ಬಳಕೆ ಈ ಕುಟುಂಬದ ವೈಶಿಷ್ಟ್ಯಗಳಲ್ಲಿ ಒಂದು.ತೆಂಗಿನ ನಾರಿನಿಂದ ತಯಾರಾದ ಕಾಯರ್‌ಪಿಟ್ ಬಳಕೆಯಿಂದ ಕೊಟ್ಟಿಗೆಯಲ್ಲಿ ಸ್ವಚ್ಛತೆ ಕಾಪಾಡುವುದು ಸುಲಭ. ನಾರಿಗೆ ನೀರಿನ ಅಂಶ ಹೀರಿಕೊಳ್ಳುವ ಗುಣ ಇರುವುದರಿಂದ ಗೋಮೂತ್ರದ ಒಂದು ಕಣವೂ ವ್ಯರ್ಥವಾಗದು.
- ಕಬ್ಬಿನ ಸೋಗೆ, ಅಡಿಕೆ ಹಾಳೆ, ತೆಂಗಿನಗರಿ, ಬಾಳೆದಿಂಡು, ಅಡಿಕೆ ಸಿಪ್ಪೆ ಸೇರಿದಂತೆ ಕೃಷಿ ತ್ಯಾಜ್ಯದ ಒಂದು ಕಡ್ಡಿಯನ್ನೂ ಹಾಳು ಮಾಡದೆ ಎಚ್ಚರದಿಂದ ತೋಟದಲ್ಲಿ ಮಣ್ಣು ಮುಚ್ಚಿಗೆಗೆ ಬಳಸುತ್ತಾರೆ. ಇದರಿಂದ ಕಳೆ ನಿಯಂತ್ರಣ, ತೇವಾಂಶ ರಕ್ಷಣೆ, ಮಣ್ಣಿನ ಮೃದುತ್ವ ಕಾಪಾಡಿಕೊಳ್ಳಲು ಸಾಧ್ಯವಾಗಿದೆ.
- ಹೊಲದ ಬದುಗಳನ್ನು ಬಂದೋಬಸ್ತ್ ಆಗಿ ಹಾಕಿರುವ ಕಾರಣ ಮಳೆ ನೀರು ಸಂಗ್ರಹ ಚೆನ್ನಾಗಿ ಆಗುತ್ತಿದೆ.ಬಸಿಗಾಲುವೆ ನಿರ್ಮಾಣದಿಂದ ಅಡಿಕೆ ಮರದ ಬೇರು ಉಸಿರಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಇದೇ ಕಾಲುವೆಗಳು ಮಳೆ ನೀರು ಹಿಡಿದಿಡುವ ಕೆಲಸವನ್ನೂ ನಿರ್ವಹಿಸುತ್ತಿವೆ.

ಇವರ 15 ಎಕರೆ ಭೂಮಿಯಲ್ಲಿ ಏನುಂಟು?ಏನಿಲ್ಲ?ಎನ್ನುವಂತಿಲ್ಲ. ಮನೆ ಬಳಕೆಗೆ ಬೇಕಾದ ಬಹುಪಾಲು ಎಲ್ಲವೂ ಇದೆ. ಅಡಿಕೆ, ತೆಂಗು, ಕೊಕೊ, ಕಾಳುಮೆಣಸು, ಜಾಕಾಯಿ, ಬಾಳೆ, ಕಬು, ರಾಗಿ, ಶೇಂಗಾ, ಭತ್ತ, ಹೆಸರು, ಉದ್ದು, ಈರುಳ್ಳಿ, ಮಾವು, ಹುಣಸೆ, ಸಪೋಟಾ, ವೆಲ್ವೆಟ್ ಬೀನ್ಸ್, ಸಿಲ್ವರ್‌ಓಕ್, ತೇಗ, ಹೆಬ್ಬೇವು, ಬಿದಿರು ಇತ್ಯಾದಿ ಎದ್ದು ಕಾಣುತ್ತವೆ.

ಬಹುಹಂತದ ಬೆಳೆ ಪದ್ಧತಿ ಮತ್ತು ಸಮಗ್ರ ಕೃಷಿ ಪದ್ಧತಿಯ ಜಾಣತನದ ಸಂಯೋಜನೆ ಇವರ ಜಮೀನಿನಲ್ಲಿ ಕಂಡುಬರುತ್ತದೆ. ಬಹುಹಂತದ ಕೃಷಿ ಪದ್ಧತಿ ಇರುವ ಕಾರಣ ಅಡಿಗೆ ಗಿಡಕ್ಕೆ ಮಾಡುವ ಉಪಚಾರ, ಹರಿಸುವ ನೀರಿನಲ್ಲಿಯೇ ಜಾಕಾಯಿ, ಕೋಕೋ, ಕಾಳುಮೆಣಸು ಆದಾಯ ತಂದು ಕೊಡುತ್ತದೆ. ಪಶ್ಚಿಮದ ಬಿಸಿಲು ಬೀಳುವ ಮರಗಳಿಗೆ ಕಾಳು ಮೆಣಸಿನ ಬಳ್ಳಿ ಹಬ್ಬಿಸಿರುವ ಕಾರಣ ಬಿಸಿಲಿನ ಹೊಡೆತದಿಂದ ಮರಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿದೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19